ಆಚಾರ್ಯ ಶ್ರೀ ಕುಂಥುಸಾಗರ ವಿರಚಿತ

# ಭಾವತ್ರಯ ಫಲಪ್ರದರ್ಶೀ

ಸಂಪಾದಕರು

**ಶ್ರೀಕಾಂತ ಭುಜಬಲಿ ಶಾಸ್ತ್ರಿ**

ನ್ಯಾಯತೀರ್ಥ, ಕಾವ್ಯತೀರ್ಥ

**ಪಂಡಿತರತ್ನ ಎ. ಶಾಂತಿರಾಜಶಾಸ್ತ್ರಿ ಟ್ರಸ್ಟ್**

ಜಯನಗರ, ಬೆಂಗಳೂರು - ೫೬೦ ೦೭೦

☎ : ೫೭೬೨ ೮೯೪೫

ಸುಭದ್ರಾದೇವಿ ಗ್ರಂಥಮಾಲಾ - ೨೫

ಆಚಾರ್ಯ ಶ್ರೀ ಕುಂಥುಸಾಗರ ವಿರಚಿತ


# ಭಾವತ್ರಯ ಫಲಪ್ರದರ್ಶೀ

ಸಂಪಾದಕರು ಮತ್ತು ಅನುವಾದಕರು

ಶ್ರೀ ಶ್ರೀಕಾಂತಭುಜಬಲಿ ಶಾಸ್ತ್ರಿಗಳು
ನ್ಯಾಯತೀರ್ಥ, ಕಾವ್ಯತೀರ್ಥ, ವೈನಾಡು-ಕೇರಳ

ಪಂಡಿತರತ್ನ ಎ. ಶಾಂತಿರಾಜಶಾಸ್ತ್ರಿ ಟ್ರಸ್ಟ್
ಜಯನಗರ, ಬೆಂಗಳೂರು - ೫೬೦ ೦೭೦
✆ : ೫೭೬೨ ೮೯೪೫

# ಆಶೀರ್ವಚನ



ಭಾವನಾ ಭವನಾಶಿನೀ ಎಂಬ ಪೂರ್ವಾಚಾರ್ಯರ ಮಾತುಗಳಲ್ಲಿ ಭವಗಳ ನಾಶಕ್ಕೆ ಶುಭ ಭಾವನೆಯು ಅತ್ಯವಶ್ಯ ಎಂಬುದನ್ನು ಮನಗಾಣಬಹುದಾಗಿದೆ. ಶುಭ ಭಾವನೆಗಳು ಮೋಕ್ಷದ ಹಾದಿಯಲ್ಲಿ ಮುನ್ನಡೆಯಲು ಅವಶ್ಯವೂ ಹೌದು, ಅಗತ್ಯವೂ ಹೌದು. ಭಾವನೆಗಳು ಪರಿಶುದ್ಧವಾದಷ್ಟು ಅಶುಭ ಕರ್ಮಗಳಿಂದ ದೂರವಾಗುತ್ತ ಕರ್ಮಕ್ಷಯ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಅಂತರಂಗದಲ್ಲಿ ಭಾವನೆಗಳು ಸದಾ ಶುಭವಾಗಿರಲು ಉತ್ತಮ ಗ್ರಂಥಗಳ ಸ್ವಾಧ್ಯಾಯ, ಚಿಂತನ, ಮನನಗಳು ನೆರವಾಗುತ್ತವೆ. ಶುಭ ಭಾವನೆಗಳಿಂದ ಆಗುವ ಪರಿಣಾಮಗಳೇನು, ಅಶುಭ ಭಾವನೆಗಳಿಂದ ಆಗುವ ಪರಿಣಾಮಗಳೇನು ಎಂಬುದನ್ನು ತಿಳಿದುಕೊಳ್ಳುವುದರಿಂದ ಯಾವ ಭಾವನೆಗಳಿಗೆ ಹೆಚ್ಚು ಮಹತ್ವ ಕೊಡಬೇಕೆಂಬುದು ತಿಳಿಯುತ್ತದೆ.

ಆಚಾರ್ಯ ಶ್ರೀ ಕುಂಥುಸಾಗರ ಮಹಾರಾಜರು ಸಂಸ್ಕೃತದಲ್ಲಿ ರಚಿಸಿರುವ 'ಭಾವತ್ರಯ ಫಲಪ್ರದರ್ಶೀ' ಕೃತಿಯಲ್ಲಿ ಅಶುಭ, ಶುಭ ಹಾಗೂ ಶುದ್ಧ ಭಾವನೆಗಳ ಬಗ್ಗೆ ಮಾರ್ಮಿಕವಾಗಿ ವಿವೇಚನೆ ಮಾಡಲಾಗಿದೆ. ನರಕ, ತಿರ್ಯಂಚಗತಿಗಳಿಗೆ ಏನು ಕಾರಣ, ದೇವಗತಿಗೆ ಕಾರಣ ಏನೆಂಬುದನ್ನು ಆಚಾರ್ಯರು ಇಲ್ಲಿ ವಿಷದಪಡಿಸುತ್ತಾರೆ. ಯಾವ ಯಾವ ಭಾವನೆಗಳಿಂದ ಯಾವ ಯಾವ ಪರಿಣಾಮವಾಗುತ್ತದೆ ಎಂಬುದನ್ನು ಗ್ರಂಥದಿಂದ ತಿಳಿಯಬಹುದಾಗಿದೆ.

ಸಂಸ್ಕೃತದಲ್ಲಿ ರಚಿತವಾದ ಭಾವತ್ರಯ ಫಲಪ್ರದರ್ಶೀಯನ್ನು ಹಿರಿಯ ವಿದ್ವಾಂಸರಾದ ಪಂಡಿತ ಶ್ರೀ ಶ್ರೀಕಾಂತಭುಜಬಲಿ ಶಾಸ್ತ್ರಿಗಳವರು ಕನ್ನಡಕ್ಕೆ ತುಂಬಾ ಸುಂದರವಾಗಿ ಅನುವಾದಿಸಿದ್ದಾರೆ. ಎಲ್ಲರೂ ಸುಲಭವಾಗಿ ಅರ್ಥೈಸಿಕೊಳ್ಳುವಂತೆ ಅನುವಾದ ಕಾರ್ಯವಾಗಿದೆ.


ಬಹಳ ಹಿಂದೆಯೇ ಪ್ರಕಟವಾಗಿದ್ದ ಕೃತಿಯ ಪುನರ್ ಮುದ್ರಣವಾಗುತ್ತಿರುವುದು ಸ್ವಾಧ್ಯಾಯ ಪ್ರೇಮಿಗಳಿಗೆ ಸಂತೋಷವನ್ನುಂಟುಮಾಡುತ್ತದೆ.

ಬೆಂಗಳೂರಿನ ಪಂಡಿತರತ್ನ ಶಾಂತಿರಾಜ ಶಾಸ್ತ್ರಿ ಟ್ರಸ್ಟ್ ಅನೇಕ ಧಾರ್ಮಿಕ ಪುಸ್ತಕಗಳನ್ನು ಪ್ರಕಟಿಸುತ್ತಾ ಬಂದಿದ್ದು ತನ್ಮೂಲಕ ಧರ್ಮಪ್ರಭಾವನೆ ಮಾಡುತ್ತಿರುತ್ತದೆ. ಕೇವಲ ಪ್ರಕಟಣೆಗೆ ಅಷ್ಟೇ ಸೀಮಿತವಾಗಿರದ ಈ ಟ್ರಸ್ಟ್ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ನೀಡಿ ಅವರ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸುತ್ತಿರುತ್ತದೆ. ಈ ಟ್ರಸ್ಟ್‌ನ ಸಂಪೂರ್ಣ ಜವಾಬ್ದಾರಿಯನ್ನು ತಮ್ಮ ಹೆಗಲಿಗೇರಿಸಿಕೊಂಡಿರುವ ಶ್ರೀ ಎಸ್. ಜಿತೇಂದ್ರ ಕುಮಾರ್‌ರವರು ಹಗಲಿರುಳೆನ್ನದೇ ಟ್ರಸ್ಟ್‌ನ ಪ್ರಗತಿಗೋಸ್ಕರ ಅತ್ಯಂತ ಪ್ರಾಮಾಣಿಕವಾಗಿ ಸೇವೆ ಸಲ್ಲಿಸುತ್ತಿರುತ್ತಾರೆ. ಇವರ ಸೇವೆಯು ಶ್ಲಾಘನೀಯವಾಗಿದೆ.

ಭಾವತ್ರಯ ಫಲಪ್ರದರ್ಶೀಯ ಪುನರ್ ಮುದ್ರಣದಲ್ಲಿ ಸಹಕರಿಸಿದ ಸಕಲರಿಗೆ ಸನ್ಮಂಗಲವಾಗಲಿ.

ಜಗದ್ಗುರು ಕರ್ಮಯೋಗಿ
ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ
ಶ್ರೀಕ್ಷೇತ್ರ ಶ್ರವಣಬೆಳಗೊಳ

ದಿನಾಂಕ:೧೯-೦೧-೨೦೦೫



ಗಣಧರಾಚಾರ್ಯ ೧೦೮ ಶ್ರೀ ಕುಂಥುಸಾಗರಜೀ ಮಹಾರಾಜರು

# ಪ್ರಕಾಶಕರ ಅರಿಕೆ

ಪ್ರಾತಃಸ್ಮರಣೀಯರಾದ ಪಂಡಿತರತ್ನ ಎರ್ತೂರು ಶಾಂತಿರಾಜಶಾಸ್ತ್ರಿಗಳ ಧಾರ್ಮಿಕ ಕೃತಿಗಳನ್ನು ಪ್ರಕಟಿಸಿರುವ ಜತೆಗೆ ಇತರ ಖ್ಯಾತ ಲೇಖಕರ ಕೃತಿಗಳನ್ನು ಪ್ರಕಟಿಸಿ, ಕನ್ನಡ ಸಾರಸ್ವತ ಲೋಕಕ್ಕೆ ಸಮರ್ಪಿಸಬೇಕೆಂಬ ಟ್ರಸ್ಟಿನ ಆಶಯದಂತೆ ಸುಭದ್ರಾದೇವಿ ಗ್ರಂಥಮಾಲಾ ಶೀರ್ಷಿಕೆಯಡಿ ಪ್ರಕಟಿಸಿರುವ ಕೃತಿಗಳ ಪೈಕಿ ಇದು ಇಪ್ಪತ್ತೈದನೆಯ ಕುಸುಮ.

೧೯೭೯ರಲ್ಲಿ ಈ ಅಮೂಲ್ಯ 'ಭಾವತ್ರಯ ಫಲಪ್ರದರ್ಶೀ' ಸಂಸ್ಕೃತದ ಕೃತಿಯನ್ನು ಸಿದ್ಧಾಂತಾಚಾರ್ಯ ಪಂಡಿತ ಶ್ರೀ ಶ್ರೀಕಾಂತಭುಜಬಲಿ ಶಾಸ್ತ್ರಿಗಳು ವೈನಾಡಿನ ಧರ್ಮಾತ್ಮರುಗಳಾದ ಶ್ರೀ ಎಂ.ಕೆ. ಅನಂತಯ್ಯ ಗೌಡರು ಮತ್ತು ಅವರ ಸಹೋದರಿ ಶ್ರೀಮತಿ ಚಂದ್ರಮತಮ್ಮನವರ ಉದಾರ ಧನಸಹಾಯದಿಂದ ಕನ್ನಡಕ್ಕೆ ಅನುವಾದಿಸಿ ಪ್ರಕಾಶಪಡಿಸಿದ್ದರು.

ಬಹಳ ಹಿಂದೆಯೇ ಈ ಕೃತಿಯ ಪ್ರತಿಗಳು ಮುಗಿದು ಹೋಗಿದ್ದರಿಂದ ಸ್ವಾಧ್ಯಾಯಾಸಕ್ತ ಧರ್ಮಬಂಧುಗಳಿಗೆ ಇದು ಅತ್ಯುಪಯುಕ್ತವಾದದ್ದೆಂದು ಮನಗಂಡ ಗುಪ್ತದಾನಿಗಳೊಬ್ಬರು, ಇದರ ಮರು ಮುದ್ರಣ ಮಾಡಿಸಿ ಪ್ರಕಾಶಪಡಿಸಲು ಸಿಂಹಪಾಲು ಉದಾರ ಧನಸಹಾಯ ನೀಡಲು ಮುಂದಾದರು. ಅವರ ಅಪೇಕ್ಷೆಯಂತೆ ಹಾಗೂ ಇನ್ನು ಕೆಲವು ಧರ್ಮಬಂಧುಗಳ ಧನಸಹಾಯ ಪಡೆದು, ಟ್ರಸ್ಟ್‌ವತಿಯಿಂದ ಈ ಕೃತಿಯ ಮರು ಮುದ್ರಣ ಮಾಡಿಸಿ ಸಮಾಜ ಬಾಂಧವರಿಗರ್ಪಿಸಲು ಹರ್ಷಿಸುತ್ತೇವೆ. ಈ ಪ್ರಕಟಣಾ ಕಾರ್ಯಕ್ಕೆ ಧನ ಸಹಾಯ ನೀಡಿರುವ ದಾನಿಗಳೆಲ್ಲರಿಗೂ ಹೃತ್ಪೂರ್ವಕ ಕೃತಜ್ಞತೆಗಳು. ಇಷ್ಟೇ ಅಲ್ಲದೆ ಈ ಗುಪ್ತದಾನಿಗಳೇ ಈ ಗ್ರಂಥಕ್ಕೆ ಉಪಯುಕ್ತವಾದ ವಿಸ್ತೃತ ಅಕಾರಾದಿ ಪರಿಶಿಷ್ಟವನ್ನು ಸಿದ್ಧಪಡಿಸಿಕೊಟ್ಟಿರುತ್ತಾರೆ. ಇದನ್ನು ಈ ಗ್ರಂಥದ ಅಂತ್ಯದಲ್ಲಿ ಅಳವಡಿಸಲಾಗಿದೆ. ಗುಪ್ತದಾನಿಗಳ ಈ ಉಪಕಾರಕ್ಕಾಗಿ ನಾವು ಅವರಿಗೆ ಆಭಾರಿಯಾಗಿದ್ದೇವೆ.

ಶ್ರೀಕ್ಷೇತ್ರ ಶ್ರವಣಬೆಳಗೊಳದ ಪರಮಪೂಜ್ಯ ಜಗದ್ಗುರು ಕರ್ಮಯೋಗಿ ಸ್ವಸ್ತಿಶ್ರೀ ಶ್ರೀ ಶ್ರೀ ಚಾರುಕೀರ್ತಿ ಭಟ್ಟಾರಕ ಮಹಾಸ್ವಾಮಿಗಳವರು ಈ ಎರಡನೇ ಆವೃತ್ತಿಗೆ ಶುಭಾಶೀರ್ವಾದ ದಯಪಾಲಿಸಿ ಹಾರೈಸಿರುತ್ತಾರೆ. ಅಲ್ಲದೆ ಪೂಜ್ಯ ಶ್ರೀಗಳವರು ಈ ಟ್ರಸ್ಟಿನ ಸಂಸ್ಥಾಪನೆಗೆ ಪ್ರೇರಣೆ, ಪ್ರೋತ್ಸಾಹ ನೀಡಿ ಈವರೆಗೆ ಅದರ ಶ್ರೇಯೋಭಿವೃದ್ಧಿಗೆ ಶುಭಹಾರೈಸಿ ನಿರಂತರವಾಗಿ ಮುನ್ನಡೆಸಿಕೊಂಡು ಬರುತ್ತಿದ್ದಾರೆ. ಇದಕ್ಕಾಗಿ ಪೂಜ್ಯಶ್ರೀಗಳವರಿಗೆ ಟ್ರಸ್ಟಿನ ಎಲ್ಲ ಧರ್ಮದರ್ಶಿಗಳ ಆಭಾರಪೂರ್ವಕ, ಭಕ್ತಿಪೂರ್ವಕ ನಮೋಸ್ತುಗಳನ್ನು ಸಮರ್ಪಿಸುತ್ತೇವೆ.

ಈ ಕೃತಿಯ ಎರಡನೇ ಆವೃತ್ತಿಯನ್ನು ಟ್ರಸ್ಟ್‌ವತಿಯಿಂದ ಮರುಮುದ್ರಣ ಮಾಡಿಸಲು ಸಂತೋಷದಿಂದ ಅನುಮತಿ ನೀಡಿದ ಸನ್ಮಾನ್ಯ ಶ್ರೀ ಶ್ರೀಕಾಂತ ಭುಜಬಲಿ ಶಾಸ್ತ್ರಿಗಳವರಿಗೆ ಆದರ ಪೂರ್ವಕ ಧನ್ಯವಾದಗಳು.

ಈ ಕೃತಿಯ ಪ್ರಕಾಶನದ ಸಂದರ್ಭದಲ್ಲಿ ಕರಡು ಪ್ರತಿಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿ, ತಿದ್ದುಪಡಿ ಮಾಡಲು ಸಹಕರಿಸಿದ ಡಾ|| ಎಂ.ಎ. ಜಯಚಂದ್ರ, ಶ್ರೀ ಜಿ.ಜಿ. ಪದ್ಮನಾಭಯ್ಯ ಮತ್ತು ಡಾ|| ಕೆ.ಆರ್. ಬ್ರಹ್ಮಾನಂದ ಇವರುಗಳಿಗೆ ನಾವು ಆಭಾರಿಯಾಗಿದ್ದೇವೆ.

ಈ ಗ್ರಂಥದ ಸುಂದರ ಅಕ್ಷರ ಸಂಯೋಜನೆ ಹಾಗೂ ಆಫ್‌ಸೆಟ್ ಮುದ್ರಣವನ್ನು ಮಾಡಿಕೊಟ್ಟ ಪ್ರಗತಿ ಗ್ರಾಫಿಕ್ಸ್‌ನ ಮಾಲಿಕರಾದ ಶ್ರೀ ಎಂ. ನಾಗರಾಜು ಮತ್ತು ಅವರ ಸಿಬ್ಬಂದಿವರ್ಗದವರಿಗೆ ಅನಂತ ಕೃತಜ್ಞತೆಗಳು.

ಬೆಂಗಳೂರು
ದಿನಾಂಕ : ೨೧-೦೧-೨೦೦೫

ಎಸ್. ಜಿತೇಂದ್ರ ಕುಮಾರ್
ವ್ಯವಸ್ಥಾಪಕ ಧರ್ಮದರ್ಶಿ
**ಪಂಡಿತರತ್ನ ಎ. ಶಾಂತಿರಾಜಶಾಸ್ತ್ರಿ ಟ್ರಸ್ಟ್**

*ಗ್ರಂಥ ಪ್ರಕಟಣೆಗೆ ಸಿಂಹಪಾಲು ಉದಾರ ಧನಸಹಾಯ ನೀಡಿರುವ ಗುಪ್ತದಾನಿಗಳಲ್ಲದೆ ಧನಸಹಾಯ ನೀಡಿರುವ ಮಹನೀಯರ ಶುಭ ನಾಮಾವಳಿಗಳು (ಸರ್ವಶ್ರೀ)*

| | |
|---|---|
| ನೇಮಚಂದ್ರ, ದೇವೇಂದ್ರಪ್ಪ ದಂಡಾವತಿ (ಮೆ\|\| ಆದಿನಾಥ ಮೆಟಲ್ ಸ್ಟೋರ್ಸ್, ರಾಮದುರ್ಗ) | ರೂ. ೭೫೦-೦೦ |
| ಡಿ.ಎಸ್. ಪಾಟೀಲ್, ಜೂನಿಯರ್ ಇಂಜಿನಿಯರ್ (ವಿದ್ಯುತ್), ಹುಬ್ಬಳ್ಳಿ | ರೂ. ೫೦೦-೦೦ |

# ಗ್ರಂಥಕರ್ತೃವಿನ ಜೀವನ ಚರಿತೆ

ಪರಮಪೂಜ್ಯ ವಿಶ್ವವಂದ್ಯ ಆಚಾರ್ಯ ಶ್ರೀ ಕುಂಥುಸಾಗರ ಮಹಾ ಮುನಿಗಳು ತಮ್ಮ ಪ್ರತಿಭಾಯುಕ್ತ ಘನ ವಿದ್ವತ್ತೆ, ಅಗಾಧ ಜ್ಞಾನ, ನಿರ್ಮಲ ಚಾರಿತ್ರ ಮತ್ತು ಕಠಿಣ ತಪಶ್ಚರಣೆಯಿಂದ ಲೋಕವಿಖ್ಯಾತರಾಗಿದ್ದರು. ಇವರು ಅನೇಕ ಗ್ರಂಥಗಳನ್ನು ರಚಿಸಿರುತ್ತಾರೆ. ಅವುಗಳಲ್ಲಿ 'ಭಾವತ್ರಯ ಫಲಪ್ರದರ್ಶೀ' ಗ್ರಂಥವು ಒಂದು. ಈ ಗ್ರಂಥದ ಸ್ವಾಧ್ಯಾಯದಿಂದ ಪಾಠಕರಿಗೆ ಅವರ ಅಗಾಧ ಜ್ಞಾನ ಮತ್ತು ಪಾಂಡಿತ್ಯದ ಅರಿವಾಗದೆ ಇರದು. ಈ ಮಹಾನುಭಾವರ ಜೀವನಚರಿತ್ರೆಯ ಪರಿಚಯ ಮಾಡಿಕೊಡುವುದು ನನ್ನ ಪರಮ ಕರ್ತವ್ಯವಾಗಿರುತ್ತದೆ.

ಅನೇಕ ಮಹಾಮಹರ್ಷಿಗಳು ಜನಿಸಿ ದಯಾಧರ್ಮದ ಪ್ರಚಾರಮಾಡಿ ಜ್ಞಾನಜ್ಯೋತಿಯನ್ನು ಬೆಳಗಿಸಿದ ಕರ್ನಾಟಕ ಪ್ರಾಂತವು ಈ ಗ್ರಂಥಕರ್ತೃವಿನ ಜನ್ಮ ಭೂಮಿಯೂ ಆಗಿರುತ್ತದೆ.

ಈ ಕರ್ನಾಟಕ ಪ್ರಾಂತದಲ್ಲಿ ನಾನಾ ಐಶ್ವರ್ಯಾದಿ ವಿಭೂತಿಗಳಿಗೆ ತವರೂರಿನಂತಿರುವ ಬೆಳಗಾಂವ ಜಿಲ್ಲೆಯಲ್ಲಿ ಅನೇಕ ಜಿನಮಂದಿರ ಗಳಿಂದಲೂ, ಜಿನ ಭಕ್ತರಾದ ಶ್ರಾವಕೋತ್ತಮರಿಂದ ಶೋಭಿಸುವ 'ಐನಾಪುರ' ವೆಂಬ ಸುಂದರ ಗ್ರಾಮ, ಅಲ್ಲಿ ಚತುರ್ಥ ಜೈನಕುಲ ತಿಲಕಪ್ರಾಯರೂ, ಶಾಂತ ಸ್ವಭಾವಿಗಳಾದ ಸಾತಪ್ಪನೆಂಬ ಶ್ರಾವಕೋತ್ತಮ, ಅವನಿಗೆ ಸದ್ಗುಣ ಶಿರೋಮಣೀ ಸರಸ್ವತೀದೇವಿಯಂತಿರುವ 'ಸರಸ್ವತಿ' ಎಂಬುವಳೇ ಧರ್ಮ ಪತ್ನಿಯು. ಈ ದಂಪತಿಗಳೀರ್ವರು ಪರಸ್ಪರ ಸ್ನೇಹ, ಧರ್ಮ ಉತ್ಸಾಹ ತತ್ಪರರಾಗಿ ದೇವಪೂಜೆ, ಗುರುಸೇವೆ ಮೊದಲಾದ ಧಾರ್ಮಿಕ ಕಾರ್ಯಗಳೇ ತಮ್ಮ ಜೀವನಾಡಿಯೆಂದು ತಿಳಿದು ಗುರುಸೇವಾತತ್ಪರರಾಗಿದ್ದರು.

ಸೌ॥ ಶ್ರೀಮತಿ ಸರಸ್ವತಿದೇವಿಯು ವೀರ ನಿರ್ವಾಣ ೨೪೨೦ ಕಾರ್ತಿಕ ಮಾಸದ ಶುಕ್ಲ ಪಕ್ಷದ ದ್ವಿತೀಯ ಶುಭದಿವಸ ಪುತ್ರರತ್ನವನ್ನು ಪ್ರಸವಿಸಿದಳು. ದ್ವಿತೀಯ ಚಂದ್ರನೋಪಾದಿಯಲ್ಲಿ ಮಗನು ವೃದ್ಧಿಹೊಂದುತ್ತಿರಲು ಮಾತಾ ಪಿತೃಗಳು ಪುತ್ರನ ಆಟಪಾಟಗಳನ್ನು ನೋಡಿ ಆನಂದಭರಿತರಾಗುತ್ತಿದ್ದರು. ಮಗನ ಜೀವನವು ಸುಸಂಸ್ಕೃತವಾಗಬೇಕೆಂಬ ಹಂಬಲದಿಂದ ಶುಭ ಮುಹೂರ್ತದಲ್ಲಿ 'ರಾಮಚಂದ್ರ' ನೆಂಬ ನಾಮಕರಣಮಾಡಿದರು. ಕ್ರಮವಾಗಿ ಚೌಲಕರ್ಮ, ಅಕ್ಷರಾಭ್ಯಾಸ, ಪುಸ್ತಕ ಗ್ರಹಣಾದಿ ಕ್ರಿಯೆಗಳನ್ನು ಮಾಡಿಸಿದರು. ಕುಮಾರನಿಗೆ ಧಾರ್ಮಿಕ ವಿದ್ಯಾಭ್ಯಾಸ, ಲೌಕಿಕ ವಿದ್ಯಾಭ್ಯಾಸ ಮಾಡಿಸಿದರು. ಬಾಲಕ ರಾಮಚಂದ್ರನ ಹೃದಯದಲ್ಲಿ ವಿನಯ ಸೌಶೀಲ್ಯಾದಿ ಸದಾಚಾರಾದಿ ಸದ್ಗುಣಗಳು ಜಾಗೃತವಾದವು. ಇದನ್ನು ಕಂಡು ಮಾತಾಪಿತೃಗಳ ಆನಂದಕ್ಕೆ ಪಾರಾವಾರವಿಲ್ಲದಾಯಿತು. ಪುರುಷೋತ್ತಮ



ರಾಮಚಂದ್ರನೋಪಾದಿಯಲ್ಲಿ ಈ ಬಾಲಕ ರಾಮಚಂದ್ರನಿಗೆ ಸಾಧು ಸಜ್ಜನರ ದರ್ಶನದ ಉತ್ಕಟ ಪ್ರಬಲ ಭಾವನೆಗಳು ಮೂಡುತ್ತಿದ್ದವು. ದೈವವಶಾತ್ ಈ ಗ್ರಾಮಕ್ಕೆ ಯಾವನಾದರೊಬ್ಬ ಸಾಧುವಿನ ಸಮಾಗಮನವಾಯಿತೆಂದರೆ ಮೊತ್ತಮೊದಲು ಅವರ ದರ್ಶನಕ್ಕೋಸ್ಕರ ಉಪಸ್ಥಿತನಾಗುತ್ತಿದ್ದನು. ಸದಾ ಧಾರ್ಮಿಕ ಜನರೊಡನೆ ತತ್ವಚರ್ಚೆ ಮೊದಲಾದ ಧಾರ್ಮಿಕ ವಿಷಯಗಳಲ್ಲಿ ಸತ್ಕಾಲಕ್ಷೇಪ ಮಾಡುತ್ತಿದ್ದನು. ಹೀಗೆ ಹದಿನಾರನೆ ವಯಸ್ಸಿನಲ್ಲಿ ಹೆಜ್ಜೆಯನ್ನಿಡಲು ಮಗನ ಲಗ್ನ ಮಾಡಬೇಕೆಂದು ಮಾತಾ-ಪಿತೃಗಳಿಗೆ ಉತ್ಕಟ ವಿಚಾರವುಂಟಾಯಿತು. ಈ ಪ್ರಶ್ನೆಯನ್ನು ಮಗನ ಮುಂದೆಯಿಡಲು, ಪೂಜ್ಯ ತಂದೆಯೇ ! ಈ ಲೌಕಿಕ ವಿವಾಹದಿಂದ ನನಗೆ ಸಂತೋಷವಾಗಲಾರದು, ಅಲೌಕಿಕ ವಿವಾಹ ಅರ್ಥಾತ್ ಮುಕ್ತಿಲಕ್ಷ್ಮಿಯೊಡನೆ ವಿವಾಹಿತನಾಗಬೇಕೆಂಬಿಚ್ಛೆಯಿದೆ. ನೀವು ಆಗ್ರಹ ಮಾಡಬಾರದೆಂಬುದಾಗಿ ಅರಿಕೆ ಮಾಡಿಕೊಂಡನು. ಪಾಪ ! ಮಾತಾ-ಪಿತೃಗಳ ಮನಸ್ಸು ಕೇಳುವುದೇ! ಪುನಃ ಮಗನೆ ಇರುವುದು ನೀನೊಬ್ಬ ಮಗ, ನೀನು ಲಗ್ನಮಾಡಿಕೊಂಡು ನಮ್ಮೆಲ್ಲರ ಕಣ್ಣುಗಳನ್ನು ತಣಿಸಬಾರದೆ ? ಎಂದು ಆಗ್ರಹಮಾಡಿದರು. ಮಾತಾ-ಪಿತೃಗಳ ಆಜ್ಞೋಲ್ಲಂಘನೆಯ ಭಯದಿಂದ ರಾಮಚಂದ್ರ ಮನಸ್ಸಿಲ್ಲದ ಮನಸ್ಸಿನಿಂದ ಒಪ್ಪಿಗೆಯನ್ನಿತ್ತನು. ಮಹಾವೈಭವದಿಂದ ವಿವಾಹ ಕಾರ್ಯವನ್ನು ನೆರವೇರಿಸಿಯೇಬಿಟ್ಟರು.

ಬಾಲ್ಯಕಾಲದ ಸುಸಂಸ್ಕಾರಗಳಿಂದ ದೃಢಮನಸ್ಕನಾಗಿದ್ದ ರಾಮಚಂದ್ರನು ಯೌವನ ಅವಸ್ಥೆಯಲ್ಲಿ ಯಾವವಿಧ ವ್ಯಸನಗಳಿಲ್ಲದವನಾಗಿ ಧರ್ಮ ಚರ್ಚೆ, ಸಾಧು-ಸಜ್ಜನರ ಸಂಗತಿರೂಪ, ಶಾಸ್ತ್ರ-ಸ್ವಾಧ್ಯಾಯರೂಪ ಸದ್ವ್ಯಸನಗಳಲ್ಲಿ ಕಾಲ ಕಳೆಯುತ್ತಾ ಇಪ್ಪತ್ತೈದು ವರ್ಷ ವಯಸ್ಸಿನವರೆಗೆ ಗೃಹಬಂಧನದಲ್ಲಿದ್ದು ಮಧ್ಯ-ಮಧ್ಯದಲ್ಲಿ ಹೇ ಭಗವಾನ್ ! ಗೃಹಬಂಧನದಿಂದ ನಿರ್ಮುಕ್ತನಾಗಿ ಜಿನದೀಕ್ಷೆಯನ್ನು ಧಾರಣೆಮಾಡುವ ಪರಮ ಸೌಭಾಗ್ಯವು ಪ್ರಾಪ್ತವಾಗುವುದು ಯಾವಾಗ, ಸರ್ವ ಸಂಗಪರಿತ್ಯಾಗಿಯಾಗಿ ಸ್ವಪರ ಕಲ್ಯಾಣಮಾಡುವ ಶುಭ ದಿನಗಳನ್ನು ಯಾವಾಗ ಕಾಣುವೆನು. ಇವೇ ಮೊದಲಾದ ಧಾರ್ಮಿಕ ಭಾವನೆಗಳು ಉದ್ದೀಪಿತವಾಗುತ್ತಿದ್ದವು.

ರಾಮಚಂದ್ರನ ಮಾವ ದೊಡ್ಡ ಧನಿಕ, ಧಾರಾಳ ಸಂಪತ್ತಿಗೆ ಒಡೆಯನಾಗಿದ್ದ. ಆತ ತನ್ನ ಅಳಿಯನನ್ನು ಕುರಿತು ರಾಮಾ ! ನನ್ನ ಸಂಪತ್ತಿಗೆ ಅಧಿಕಾರಿ ಯಾಗಿ ಅಧಿಕಾರವನ್ನು ನಡೆಸು, ನನಗೆ ಸಮಾಧಾನವಾಗುವುದು ಎಂದು ಪರಿಪರಿಯಾಗಿ ಹೇಳಿಕೊಳ್ಳಲು ದಯಾರ್ದ್ರಮನಸ್ಕನಾದ ರಾಮಚಂದ್ರನು ಮಾವನಿಗೆ ದುಃಖ ವುಂಟಾಗಬಾರದೆಂಬ ಸನ್ಮನಸ್ಸಿನಿಂದ ಕೆಲವು ಸಮಯಗಳ ತನಕ ಗೃಹಕೃತ್ಯದ ಕಾರ್ಯಭಾರವನ್ನು ನೋಡಿಕೊಂಡಿರುವಾಗ ನಾನೇ ನನ್ನ ಮನೆ-ಮಠ ಮೊದಲಾದವುಗಳನ್ನು ಬಿಟ್ಟುಬಿಡಬೇಕೆಂದಿರುವೆ, ಈ ಮಾವನ ಧನ ಸಂಪತ್ತಿಯಿಂದ

ನಾನೇನು ಮಾಡಬೇಕು, ಎಂಬ ವಿರಾಗ ಭಾವನೆ ತಲೆಯೆತ್ತಿ ಹೇಳತೊಡಗಿತು. ಆಳಿಯನ ಈ ವರ್ತನೆಯನ್ನು ನೋಡಿ ರಾಮಚಂದ್ರ, ಇನ್ನು ಸಂಸಾರ ಜಂಜಾಟದಲ್ಲಿ ಸಿಲುಕಲಾರ, ಈತನಿಗೆ ಪರಿಪೂರ್ಣ ವೈರಾಗ್ಯದೀಪವು ಬೆಳಗುತ್ತಿದೆಯೆಂಬ ಅರಿವಾಯಿತು ಮಾವನಿಗೆ.

ಧರ್ಮ-ಕರ್ಮ ಸಂಯೋಗವಶಾತ್ ಮಾತಾಪಿತೃಗಳು ಸ್ವರ್ಗವಾಸಿಗಳಾದರು. ವಿಯೋಗ ದುಃಖವು ಕಡಿಮೆಯಾಗುವುದರೊಳಗೆ ಸಹೋದರ ಸಹೋದರಿಯ ಅಕಾಲ ಮರಣವಾಯಿತು. ಸುಟ್ಟಗಾಯದ ಮೇಲೆ ಉಪ್ಪು ನೀರು ಹೊಯ್ದಂತಾಯಿತು. ಇದರಿಂದ ರಾಮಚಂದ್ರನು ವೈರಾಗ್ಯರೂಪವಾದ ಅಗ್ನಿಕುಮಾರದೇವನಿಗೆ ವಿಯೋಗರೂಪ ತುಪ್ಪವನ್ನು ಸುರಿದಂತಾಯಿತು. ಈ ಸುಸಂದರ್ಭವನ್ನು ಕಾಯ್ದುಕೊಂಡುನಿಂತಿರುವಂತೆ ಐನಾಪುರ ಗ್ರಾಮಕ್ಕೆ ಪ್ರಾತಃಸ್ಮರಣೀಯ ಪೂಜ್ಯಪಾದ ಆಚಾರ್ಯಶ್ರೇಷ್ಠ ೧೦೮ ಶ್ರೀ ಶಾಂತಿಸಾಗರ ಮಹಾಮುನಿವರ್ಯರ ಆಗಮನವೂ ಆಯಿತು. ವೀತರಾಗೀ ತಪೋಧನರ ದರ್ಶನಮಾತ್ರದಿಂದ ರಾಮಚಂದ್ರನ ಮನಸ್ಸು ಸಂಸಾರಭೋಗ ವಿಷಯಗಳಿಂದ ಉದಾಸೀನವಾಯಿತು. ಹಸ್ತಗತವಾದ ಸತ್ಸಮಾಗಮ ನಿಧಿಯನ್ನು ಕಳೆದುಕೊಳ್ಳುವುದುಚಿತವಲ್ಲವೆಂದು ನಿಶ್ಚಯಿಸಿಕೊಂಡು ಆಚಾರ್ಯರ ಸನ್ನಿಧಿಯಲ್ಲಿ ಆಜನ್ಮ ಬ್ರಹ್ಮಚರ್ಯವ್ರತವನ್ನು ಧಾರಣೆಮಾಡಿದನು ರಾಮಚಂದ್ರ.

ಸನ್ ೧೯೨೫ನೇ ಫೆಬ್ರವರಿ ತಿಂಗಳಲ್ಲಿ ಶ್ರವಣಬೆಳ್ಗುಳ ಮಹಾಕ್ಷೇತ್ರದಲ್ಲಿ ಶ್ರೀ ಭಗವಾನ್ ಗೋಮಟೇಶ್ವರ ಮಹಾಮಸ್ತಕಾಭಿಷೇಕವು ನಡೆಯುವುದೆಂಬ ಶುಭ ಸಮಾಚಾರವು ಈ ಬ್ರಹ್ಮಚಾರಿಗಳಿಗೂ ತಿಳಿಯಿತು. ಮಹಾಪೂಜೆಗೆ ಹೋಗುವುದಕ್ಕಿಂತ ಮೊದಲು ತಮ್ಮ ಸ್ವಾಧೀನತೆಯಲ್ಲಿದ್ದ ಭೂಸಂಪತ್ತಿ, ಧನ ಸಂಪತ್ತಿ, ಮೊದಲಾದವುಗಳನ್ನು ದಾನ-ಧರ್ಮಾದಿ ಸತ್ಕಾರ್ಯಗಳಲ್ಲಿ ವಿನಿಯೋಗಿಸಿ, ನಿಃಷ್ಪರಿಗ್ರಹನಾಗಿ ಶ್ರವಣಬೆಳ್ಗುಳಕ್ಕೆ ಹೊರಟೇಬಿಟ್ಟರು. ಅಲ್ಲಿ ಸಂಘಸಹಿತ ವಿರಾಜಮಾನರಾಗಿದ್ದ ಆಚಾರ್ಯ ಶಾಂತಿಸಾಗರ ಮಹಾರಾಜರ ಸನ್ನಿಧಿಯಲ್ಲಿ ಕ್ಷುಲ್ಲಕ ದೀಕ್ಷೆಯನ್ನು ಅಂಗೀಕರಿಸಿ **ಪಾರ್ಶ್ವಕೀರ್ತಿ** ಎಂಬ ಹೆಸರಿನಿಂದ ಶೋಭಿಸಿದರು. ಅನಂತರ ಧ್ಯಾನಾಧ್ಯಯನ ಕಾರ್ಯಗಳಲ್ಲಿ ಸಮಯವನ್ನು ಕಳೆಯುತ್ತಾ ನಿರ್ದೋಷಚಾರಿತ್ರವಂತರಾಗಿ ಸಂಘದಲ್ಲಿಯೇ ಇದ್ದರು.

ಇತ್ತ ತಾವು ದೀಕ್ಷೆಯನ್ನು ಕೈಕೊಂಡನಂತರವೂ ಅವರ ಧರ್ಮಪತ್ನಿಯು ಗೃಹಸ್ಥಧರ್ಮದಲ್ಲಿಯೇ ಕಾಲವನ್ನು ಕಳೆಯುತ್ತಿದ್ದರು.

ಹೀಗೆ ನಾಲ್ಕು ವರ್ಷಗಳು ಗತಿಸಿದವು. ಆಚಾರ್ಯರ ಚಾತುರ್ಮಾಸವು ಕುಂಭೋಜ (ಬಾಹುಬಲಿ ಪರ್ವತ) ದಲ್ಲಿ ಆಯಿತು. ಆಗ ಆಚಾರ್ಯ ಶ್ರೀಯವರು



ಕ್ಷುಲ್ಲಕ ಪಾರ್ಶ್ವಕೀರ್ತಿಯವರ ಚಾರಿತ್ರದ ನಿರ್ಮಲತೆಯನ್ನು ನೋಡಿ ಐಲಕ ದೀಕ್ಷೆಯನ್ನಿತ್ತರು.

ಅದೇ ಚಾತುರ್ಮಾಸದಲ್ಲಿ ಆಚಾರ್ಯರ ದರ್ಶನಕ್ಕಾಗಿ ಮುಂಬಯಿ ನಗರದ ಶ್ರೇಷ್ಠಿವರ್ಯರಾದ ಪೂನಮಚಂದ ಘಾಸೀಲಾಲ ಜೋಹರಿಯವರು ಬಂದರು. ಭಕ್ತಿಭಾವದಿಂದ ವಂದಿಸಿ, ಸ್ತುತಿಸಿ ಸ್ವಾಮೀ ! ತಮ್ಮ ಮುನಿ ಸಂಘವನ್ನು ತೀರ್ಥರಾಜ ಸಮ್ಮೇದಶಿಖರಿಯ ದರ್ಶನಮಾಡಿಸಬೇಕೆಂಬ ಉತ್ಕಟ ಇಚ್ಛೆಯಿದೆ, ಅದಕ್ಕೆ ಸು-ಅವಸರವನ್ನು ಒದಗಿಸಿಕೊಡಬೇಕೆಂದು, ನನ್ನನ್ನು ಪವಿತ್ರ ಮತ್ತು ಕೃತಾರ್ಥನನ್ನಾಗಿ ಮಾಡಬೇಕೆಂದು ಪ್ರಾರ್ಥಿಸಿಕೊಳ್ಳಲು ಸಂಘಭಕ್ತ ಶಿರೋಮಣಿಯ ವಿನೀತ ಪ್ರಾರ್ಥನೆಯನ್ನು ಕರುಣಾದೃಷ್ಟಿಯಿಂದ ಸಮ್ಮತಿಯನ್ನಿತ್ತರು ಶ್ರೀಯವರು. ಸಮ್ಮೇದಾಚಲದ ದರ್ಶನಕ್ಕಾಗಿ ಶುಭ ಮುಹೂರ್ತದಲ್ಲಿ ಸಂಘವು ಕುಂಭೋಜ ಗ್ರಾಮವನ್ನು ಬಿಟ್ಟು ಹೊರಟಿತು. ಐಲಕರು ಕೂಡಾ ಸಂಘದೊಡನೆ ಹೊರಟರು. ಸಂಘ ಸಮ್ಮೇದಗಿರಿಯನ್ನು ತಲುಪಿತು. ಅಲ್ಲಿ ವಿರಾಟ ಧಾರ್ಮಿಕ ಸಭೆಯ ಸಿದ್ಧತೆಯಾಯಿತು. ಅಲ್ಲಿ ಮಹಾಸಭೆಯ ಮತ್ತು ಶಾಸ್ತ್ರೀಪರಿಷತ್ತಿನ ಅಧಿವೇಶನವು ಅಭೂತಪೂರ್ವವಾಗಿ ಜರುಗಿತು.

ಅನಂತರ ದರ್ಶನಮಾಡಿ ಸಂಘವು ಅನೇಕ ಸ್ಥಾನಗಳಲ್ಲಿ ವಿಹರಿಸುತ್ತಾ ದಯಾಧರ್ಮದ ಮಳೆಯನ್ನುಗರೆಯುತ್ತಾ ಕಟನಿ ಎಂಬಲ್ಲಿ ಚಾತುರ್ಮಾಸವನ್ನು ಪೂರ್ಣಮಾಡಿತು. ಮರುವರ್ಷ ಸಂಘದ ಚಾತುರ್ಮಾಸದ ವ್ರತಾರಂಭಕ್ಕಾಗಿ ಲಲಿತಪುರವು ಯೋಗ್ಯವೆಂದು ನಿಶ್ಚಿತವಾಗಿತ್ತು. ಆಚಾರ್ಯ ಶ್ರೀಯವರ ಸಂಘದಲ್ಲಿ ಧ್ಯಾನಾಧ್ಯಯನ ಕಾರ್ಯವಲ್ಲದ ಇನ್ನಾವ ಕಾರ್ಯಗಳೇ ಇರಲಿಲ್ಲ. ಕ್ರಮಬದ್ಧವಾಗಿ ಅಧ್ಯಯನ ಕಾರ್ಯವು ಪ್ರಾರಂಭವಾಯಿತು. ಆ ಸಂಘದಲ್ಲಿದ್ದ ವಿದ್ವಾನ್ **ಸುಧರ್ಮಸಾಗರ** ಮುನಿಗಳಲ್ಲಿ ಪ್ರತಿಯೊಬ್ಬ ಸಾಧುವು ಶಾಸ್ತ್ರಾಧ್ಯಯನದಲ್ಲಿ ನಿರತರಾದರು. ಅವರಲ್ಲಿ ಗ್ರಂಥನಾಯಕ ಐಲಕ ಪಾರ್ಶ್ವಕೀರ್ತಿಯವರು ಕೂಡಾ ವ್ಯಾಕರಣ, ಸಿದ್ಧಾಂತ ಮತ್ತು ನ್ಯಾಯಗ್ರಂಥಗಳ ಅಧ್ಯಯನವನ್ನು ಪ್ರಾರಂಭಿಸಿದರು.

ತತ್ವಜ್ಞಾನದ ಅಭಿರುಚಿಯ ಪ್ರಬಲತೆಯಿಂದ ಸಂಯಮೀ ಘನ ವಿದ್ವಾಂಸ ಸದ್ಗುರುವಿನ ಸಮಾಗಮವೂ ಆದುದರಿಂದ ಅಲ್ಪ ಸಮಯಗಳಲ್ಲಿಯೇ ದಿಗ್ಗಜ ವಿದ್ವಾಂಸರಾದರು ಪಾರ್ಶ್ವಕೀರ್ತಿಗಳು. ಈ ಅವಧಿಯ ಮಧ್ಯದಲ್ಲಿಯೇ ಸೋನಾಗಿರಿ ಸಿದ್ಧಕ್ಷೇತ್ರದಲ್ಲಿ ಗುರುಪುಂಗವ ಆಚಾರ್ಯ ಶ್ರೀಯವರು ಐಲಕ ಪಾರ್ಶ್ವಕೀರ್ತಿಯ ವಿದ್ವತ್ತೆ, ಸರಳತೆ, ವಿಶುದ್ಧ ಚಾರಿತ್ರಾದಿಗುಣಗಳನ್ನು ಕಂಡು **ದಿಗಂಬರ ದೀಕ್ಷೆಯನ್ನಿತ್ತು ಕುಂಥುಸಾಗರ**ನೆಂಬ ನಾಮಧೇಯ ಮಾಡಿದರು. ತಮ್ಮ ಚಾರಿತ್ರದಲ್ಲಿ ನಿರ್ಮಲತೆಯು ವೃದ್ಧಿಯಾಗುತ್ತಿದ್ದಂತೆ ಜ್ಞಾನದಲ್ಲಿಯೂ ಅತಿ ವಿಶುದ್ಧತೆಯು ವೃದ್ಧಿಯಾಯಿತು.

ಲಲಿತಪುರ ಚಾತುರ್ಮಾಸ ಮೊದಲುಗೊಂಡು ಈಡರ ಚಾತುರ್ಮಾಸದವರೆವಿಗೂ ತಮ್ಮ ಅಧ್ಯಯನವು ಸಾಂಗವಾಗಿಯೇ ಸಾಗಿತು. ತಮ್ಮ ಅಗಾಧ ಜ್ಞಾನ ಪಾಂಡಿತ್ಯವನ್ನು ಎಷ್ಟು ಬಣ್ಣಿಸಿದರೂ ಅಲ್ಪವೇ.

ತಮ್ಮಿಂದ ರಚಿತ ಸಂಸ್ಕೃತ ಗ್ರಂಥಗಳ ಪಾಠಕರಿಗೆ ತಮ್ಮ ಧರ್ಮಗ್ರಂಥದ, ವ್ಯಾಕರಣ ಪಾಂಡಿತ್ಯದ ಪರಿಚಯವಾಗದೆ ಇರಲಿಕ್ಕಿಲ್ಲವು. ಅನೇಕ ವರ್ಷ ಅಧ್ಯಯನಮಾಡಿ ನಾನಾ ಉಪಾಧಿಗಳಿಂದ ವಿಭೂಷಿತರಾದ ಘನ ವಿದ್ವಾಂಸರೊಡನೆ ತಮ್ಮನ್ನು ತುಲನೆಮಾಡಲು ಸಾಧ್ಯವಿಲ್ಲವು. ನಿರ್ಮಲವೂ ನಿರ್ದೋಷವೂ ಆದ ಚಾರಿತ್ರದ ಪ್ರಭಾವದಿಂದ ಜ್ಞಾನಮಾರ್ಗವೂ ಕೂಡಾ ಬೆಳಗಿತು. ಆದರ ಮಹಿಮೆಯಿಂದ ಸರ್ವಜನಪ್ರಿಯ ಭಕ್ತಿಪಾತ್ರರಾಗಿದ್ದ ಗ್ರಂಥರಚನಾಶೈಲಿಯು ಎಷ್ಟು ಅಪೂರ್ವ ಮತ್ತು ಅಮೋಘವಾಗಿತ್ತೋ ಅಷ್ಟೇ ವಕ್ತೃತ್ವ ಕಲೆಯು ನಿರರ್ಗಳವೂ ಮಹತ್ವವೂ ಆಗಿತ್ತು. ಶ್ರೋತೃವೃಂದದ ಮನಸ್ಸನ್ನು ತಲ್ಲಣಿಸುವಂಥಾದ್ದಾಗಿತ್ತು. ವಸ್ತು, ಧರ್ಮಗಳ ಸ್ವರೂಪವನ್ನು ನಿರೂಪಿಸುವ ಸಾಮರ್ಥ್ಯವೂ ಕೂಡಾ ಅದ್ವಿತೀಯವಾಗಿತ್ತು. ಭವ್ಯಜೀವಿಗಳ ಹೃದಯಾಂತರಾಳದಲ್ಲಿ ಸಂಸಾರದ ನಿಸ್ಸಾರತೆಯ ಭಾವನೆಯನ್ನುಂಟುಮಾಡುವ ಪ್ರತಿಭಾಶಕ್ತಿಯನ್ನು ಕಂಡು ಆಚಾರ್ಯ ಶ್ರೀ ಶಾಂತಿಸಾಗರ ಮಹಾರಾಜರು ಇವರಿಗೆ ಕುಂಥುಸಾಗರ ಎಂಬ ನಾಮಧೇಯವನ್ನು ಮಾಡಿರಬೇಕೆಂದು ವ್ಯಕ್ತವಾಗುತ್ತದೆ.

ತಾವು ಕ್ಷುಲಕ, ಐಲಕ ಅವಸ್ಥೆಯಲ್ಲಿರುವಾಗ ಮೂರು ಲಕ್ಷ ಜನಗಳಿಗೆ ಯಜ್ಞೋಪವೀತ ಸಂಸ್ಕಾರದಿಂದ ಸುಸಂಸ್ಕೃತರನ್ನಾಗಿಯೂ, ಮತ್ತು ಮದ್ಯ, ಮಾಂಸ, ಮಧುಗಳು ಸೇವಿಸುವುದಕ್ಕೆ ಅಯೋಗ್ಯವಾಗಿವೆಯೆಂದು ಉದ್ಬೋಧಿಸಿ ತ್ಯಾಗ ಮಾಡಿಸಿದ ಮಹಾಮೂರ್ತಿಗಳಾಗಿದ್ದರು. ಉತ್ತರ ದೇಶದಲ್ಲಿ ವಿಹರಿಸುತ್ತಾ, ಧರ್ಮ ಜಾಗೃತಿಮಾಡುತ್ತಾ, ಚಾರಿತ್ರ, ಸಂಯಮ, ಧರ್ಮ ಶ್ರದ್ಧಾಭಕ್ತಿಯುಳ್ಳವರನ್ನಾಗಿ ಮಾಡಿದುದರ ಫಲವಾಗಿಯೇ ಸಕಲ ಭವ್ಯರು ''ಇದ್ದರೆ ಇಂತಹ ಮಹಾ ಸಾಧುಗಳಿರಬೇಕೆಂದು'' ಮುಕ್ತಕಂಠದಿಂದ ಹೊಗಳುತ್ತಿದ್ದರು.

* * *

# ರಾಜ ಸನ್ಮಾನ

ಶ್ರೀ ಪೂಜ್ಯಶ್ರೀಯವರ ದಿವ್ಯ ವಿಹಾರದಿಂದ ಲಕ್ಷಾಂತರ ಜೀವಿಗಳ ಉದ್ಧಾರವಾಯಿತು. ದಿಗಂಬರ ಯೋಗಿಗಳ ಆದರ್ಶ ವೃತ್ತಿಯನ್ನು ಕಂಡು ಪ್ರತಿಯೊಬ್ಬರ ಮುಖದಿಂದ ಧನ್ಯ! ಧನ್ಯ!! ಉದ್ಗಾರವೇ ಹೊರಹೊಮ್ಮುತ್ತಿತ್ತು. ಗುಜರಾತ ಪ್ರಾಂತದ ಕೆಲವು ಸಂಸ್ಥಾನದ ಅಧಿಪತಿಗಳು ಕುಂಥುಸಾಗರ ಮಹಾರಾಜರ ದರ್ಶನದ ಉತ್ಸುಕರಾಗಿರುತ್ತಿದ್ದರು.

ಸದಾಸನ, ಟೀಂಬಾ, ಅಲುವಾ, ಮಾಣಿಕಪುರ, ಮೋಹನಪುರ, ಬಡಾಸನಾ, ಪೇಥಾಪುರ, ಓದಾನ, ದೇಲವಾಡ ಮೊದಲಾದ ಚಿಕ್ಕ, ದೊಡ್ಡ ಸಂಸ್ಥಾನಗಳ ಅಧಿಪತಿಗಳು ತಮ್ಮ ಪರಮ ಭಕ್ತರಾಗಿದ್ದರು. ತಮ್ಮ ಸಂಘ ಬಡೌದಾ ರಾಜಧಾನಿಗೆ ಚಿತ್ತೈಸಿದಾಗ ರಾಜಕೀಯ ವೈಭವದೊಡಗೂಡಿ ಸ್ವಾಗತವಿತ್ತ ವಿಷಯವು-ರಾಜ್ಯದ ನ್ಯಾಯಮಂದಿರದಲ್ಲಿ ಸಹಸ್ರಾರು ಪ್ರಜಾ ವರ್ಗ, ಆಗಿನ ದಿವಾನರಾಗಿದ್ದ ಶ್ರೀ ಸರ್ ಕೃಷ್ಣಮಾಚಾರಿಯವರ ಉಪಸ್ಥಿತಿಯಲ್ಲಿ ತಮ್ಮ ಮುಖದಿಂದ ಹೊರಟ ತತ್ತ್ವ ವಿವೇಚನಾಪೂರ್ಣ ಪ್ರವಚನವು ಸುವರ್ಣ ಅಕ್ಷರದಲ್ಲಿ ಬರೆಯಿಸಿ ಇಡುವುದಕ್ಕೆ ಯೋಗ್ಯವಾಗಿತ್ತು. ಆಗ ಜೈನ ಮಹಾ ಮುನಿಗಳ ವೈಶಿಷ್ಟತೆಯ ಪ್ರಭಾವವು ಸಕಲ ಜನ ಹೃದಯಪಟಲದಲ್ಲಿ ಮುದ್ರೆ ಒತ್ತಿತ್ತು. ಹೀಗೆ ಅನೇಕ ಸ್ಥಾನಗಳಲ್ಲಿ ಸಾರ್ವಜನಿಕ ಹಿತಕಾರಕ ತತ್ತ್ವೋಪದೇಶಗಳು ಸಾಂಗವಾಗಿ ನಡೆಯುತ್ತಿದ್ದವು. ಧರ್ಮಪ್ರಭಾವನಾ ಕಾರ್ಯಗಳು ಅಭೂತಪೂರ್ವವಾಗಿದ್ದವು. ಅದೇ ಕಾಲಕ್ಕೆ ತಾರಂಗಾ ಪಂಚ ಕಲ್ಯಾಣ ಪ್ರತಿಷ್ಠಾ ಮಹೋತ್ಸವದ ವಿರಾಟ ಧರ್ಮ ಸಭೆಯಲ್ಲಿ ಥಾಣೇ, ಆಚಾರ್ಯ ಶಾಂತಿಸಾಗರ ಮಹಾಮುನಿಗಳ ಸಂಘ, ಮತ್ತು ಭವ್ಯ ಭಕ್ತರ ಜನ ಸಮೂಹದ ಸಮ್ಮತದಿಂದ ತಮ್ಮನ್ನು ಆಚಾರ್ಯಪದವಿಯಿಂದ ಅಲಂಕರಿಸಿದರು.

ಅನೇಕ ಸಂಸ್ಥಾನಗಳ ಅಧಿಪತಿಗಳು ತಮ್ಮ (ಆಚಾರ್ಯ ಕುಂಥುಸಾಗರ ಮುನಿಗಳ) ವಿದ್ವತ್ತೆಗೂ, ಪರಿಶುದ್ಧ ಚಾರಿತ್ರಕ್ಕೂ ಮೆಚ್ಚಿ, ಪ್ರಭಾವಿತರಾಗಿ ತಮ್ಮ ತಮ್ಮ ರಾಜ್ಯಗಳಲ್ಲಿ ''ಅಹಿಂಸಾ ದಿನಾಚರಣೆಯನ್ನು'' ಆಚರಿಸಲು ಘೋಷಿಸಿದರು. ಆದರಂತೆ ಶ್ರೀಯವರ ಜಯಂತಿ ಉತ್ಸವವನ್ನಾಚರಿಸಲು ಘೋಷಣೆ ಮಾಡಿದರು.

ಈ ಪ್ರಕಾರ ಶ್ರೀಯವರು ಸರ್ವಜನ ಶ್ರದ್ಧಾಪಾತ್ರರಾಗಿ ತಮ್ಮ ಸಾತಿಶಯ ತಪೋಮಹಿಮೆಯಿಂದ ಅಗಣಿತ ಜನಸಮೂಹವನ್ನು ಉದ್ಧರಿಸಿ ದಿಗಂಬರ ಜೈನ ಧರ್ಮದ ಪ್ರಚಾರಮಾಡಿದರು. ಇದರಿಂದ ಅನೇಕ ಪ್ರಾಂತಗಳ ರಾಜರುಗಳು ಈ ಮಹಾಮಹಿಮರ ಚರಣ ಭಕ್ತರಾಗಿದ್ದರು.

## ಗ್ರಂಥ ನಿರ್ಮಾಣ

ಪರಮ ಪೂಜ್ಯ ಶ್ರೀಯವರು ತಮ್ಮ ಅಗಾಧ ವಿದ್ವತ್ತೆಯ ಬಲದಿಂದ ಅನೇಕ ಗ್ರಂಥಗಳನ್ನು ರಚಿಸುತ್ತಾ ಭವ್ಯ ಜೀವಿಗಳ ಆತ್ಮಕಲ್ಯಾಣಾರ್ಥವಾಗಿ ನಿತ್ಯವೂ ಒಂದು ಘಂಟೆಕಾಲ ಧರ್ಮೋಪದೇಶವನ್ನೀಯುತ್ತಾ ತತ್ವಚರ್ಚೆ ಮತ್ತು ಶಂಕಾಸಮಾಧಾನ ಮೊದಲಾದ ಕಾರ್ಯಗಳನ್ನು ಮಾಡುತ್ತಾ ಶೇಷ ಸಮಯವನ್ನು ಮೌನಸ್ಥರಾಗಿ ಗ್ರಂಥ ನಿರ್ಮಾಣ ಕಾರ್ಯದಲ್ಲಿ ತನ್ಮಯರಾಗಿ-ಇರುತ್ತಿದ್ದರು.

ಚತುರ್ವಿಂಶತಿ ಜಿನಸ್ತೋತ್ರ, ಶಾಂತಿಸಾಗರ ಚರಿತ್ರೆ, ಬೋಧಾಮೃತಸಾರ, ನಿಜಾತ್ಮ ಶುದ್ಧಿಭಾವನೆ, ಮೋಕ್ಷಮಾರ್ಗ ಪ್ರದೀಪ, ಜ್ಞಾನಾಮೃತಸಾರ, ಲಘು ಬೋಧಾಮೃತಸಾರ, ಲಘು ಜ್ಞಾನಾಮೃತಸಾರ, ಸ್ವರೂಪ ದರ್ಶನ ಸೂರ್ಯ, ನರೇಶಧರ್ಮ ದರ್ಪಣ, ಸುಧರ್ಮೋಪದೇಶಾಮೃತಸಾರ, ಶ್ರಾವಕ ಪ್ರತಿಕ್ರಮಣಸಾರ, ಶಾಂತಿ ಸುಧಾಸಿಂಧು, ಸ್ವಾನಂದ ಸಾಮ್ರಾಜ್ಯಪದ ಪ್ರದರ್ಶೀ, ಲಘು ಸುಧರ್ಮೋಪದೇಶಾಮೃತಸಾರ, ಲಘು ಪ್ರತಿಕ್ರಮಣ, ಸೂವರ್ಣ ಸೂತ್ರ ಮೊದಲಾದ ಮಹತ್ವಪೂರ್ಣಗ್ರಂಥಗಳು ಪೂಜ್ಯಶ್ರೀಯವರ ಸತತ ಪರಿಶ್ರಮದ ಮಹತ್ಫಲಗಳಾಗಿರುತ್ತವೆ.

ಸರಸ್ವತೀದೇವಿಯೆ ವರವಿತ್ತುದರ ಮಹತ್ತರ ಫಲವಾಗಿತ್ತು ಶ್ರೀಯವರ ಕರ್ಮಕ್ಷಯೋಪಶಮದ ಪ್ರಬಲ ಫಲವಾಗಿರುತ್ತದೆ.

* * *

## ಓದುಗರ ಅಭಿಪ್ರಾಯ

- ರತನಚಂದ ನೇಮಿನಾಥಕೋಟಿ,* ಎಂ.ಎ.

'ಜಿನ' ನಿಂದ ಬೋಧಿಸಲಾದ ಧರ್ಮವು ಜೈನಧರ್ಮವಾಗಿದೆ. 'ಜಿನ' ಎಂದರೆ ಜಯಿಸಿದವನು ಎಂದಾಗುವುದು. ಯಾರು ತಮ್ಮ ಇಂದ್ರಿಯಗಳನ್ನು ಹಾಗೂ ಕರ್ಮವನ್ನು ಗೆಲ್ಲುವರೋ ಅವರೇ ಜಿನರು, ಸರ್ವಜ್ಞರು, ಪರಮಾತ್ಮರು. ಜೀವಕ್ಕೆ ಸತ್ಯದರ್ಶನ ಮಾಡಿಸುವುದೇ ಜೈನದರ್ಶನದ ಮೂಲಧ್ಯೇಯವಾಗಿದೆ. ಸಕಲ ಜೀವರಾಶಿಗಳಿಗೂ ಭಾವಮರಣದಿಂದ ಮುಕ್ತಗೊಳಿಸುವುದೇ ಇದರ ಆಶಯವಾಗಿದೆ.

ಅಹಿಂಸೆ, ಅಪರಿಗ್ರಹ, ಅನೇಕಾಂತ, ಕರ್ಮಸಿದ್ಧಾಂತ ಮುಂತಾದವುಗಳು ಜಿನಧರ್ಮದ ಮಹೋನ್ನತ ಸಿದ್ಧಾಂತಗಳಾಗಿವೆ. ಸಮಸ್ತ ಜೀವರಾಶಿಗಳ ಹಿತಬಯಸುವ ತತ್ತ್ವಗಳಾಗಿವೆ. ಇವೆಲ್ಲವೂ ವೈಜ್ಞಾನಿಕ ದೃಷ್ಟಿಯಿಂದ ನೋಡಿದರೂ ಸತ್ಯವಾಗಿದ್ದು ಸಮನ್ವಯ ದೃಷ್ಟಿ ಹೊಂದಿದವುಗಳಾಗಿವೆ. 'ಬಾಳು ಮತ್ತು ಬಾಳಗೊಡು' 'ಸಮತಾಸರ್ವಭೂತೇಷು ಸಂಯಮಃ ಶುಭಭಾವನಾ' ಎಂಬ ಮಾತುಗಳು ಜಿನೋಪದೇಶದ ಸಾರವಾಗಿವೆ. 'ಆತ್ಮವತ್ ಸರ್ವಭೂತಾನಿ' ತನ್ನಂತೆ ಇತರ ಜೀವಿಗಳನ್ನು ಕಾಣುವುದೇ ಅಹಿಂಸಾಧರ್ಮದ ಲಕ್ಷಣಗಳಾಗಿವೆ. ಇಂತಹ ಮಹಾನ್ ತತ್ತ್ವಸಿದ್ಧಾಂತಗಳನ್ನು ಹೊಂದಿರುವ ಜೈನಧರ್ಮವು ವಿಶ್ವಧರ್ಮವಾಗಿದೆ. ಜಿನನಾದ ಮಹಾಮಾನವನೊಬ್ಬನ ನಿಜಾತ್ಮನ ಅನುಭವದ ಸಾರವೇ ಜೈನಧರ್ಮವಾಗಿದೆ.

ಆಚಾರ ಪ್ರಧಾನವಾದ ಈ ಧರ್ಮದ ಪಾಲನೆಯಲ್ಲಿ ಶ್ರಾವಕ ಮತ್ತು ಮುನಿ ಇಬ್ಬರೂ ಮುಖ್ಯರೇ. ಭಗವಾನ್ ಮಹಾವೀರರಿಂದ ಪ್ರವಹಿಸಿಬಂದ ತತ್ತ್ವಸಿದ್ಧಾಂತಗಳನ್ನು ಉತ್ತಮ ರೀತಿಯಿಂದ ತಿಳಿದು ಶ್ರದ್ಧೆಯಿಂದ ಆಚರಿಸುವ ಶ್ರಾವಕನೇ ಮುಂದೆ ಮಹಾಮುನಿಯಾಗಿ ಸ್ವಪರ ಕಲ್ಯಾಣ ಮಾರ್ಗದ ಮಾರ್ಗದರ್ಶಕನಾಗುತ್ತಾನೆ. ಇಂಥ ಭವ್ಯ ಜಿನೋತ್ತಮರಾದ ಅನೇಕ ಆಚಾರ್ಯರಿಂದ ಧರ್ಮವು ಭಗವಾನ್ ಮಹಾವೀರರ ಕಾಲದಿಂದ

* ಉಪ ನಿರ್ದೇಶಕರು, ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನಾ ಸಂಸ್ಥೆ, ಶ್ರವಣಬೆಳಗೊಳ, ಸಾ: ಬಿಜಾಪುರ.

ಇಲ್ಲಿಯವರೆಗೂ ಹರಿದುಬಂದಿದೆ. ಅಂಥ ಆಚಾರ್ಯರಲ್ಲಿ ಆಚಾರ್ಯ ಕುಂಥು ಸಾಗರರೂ ಒಬ್ಬರು. ಅವರೇ ಈ ಗ್ರಂಥದ ಕರ್ತೃವಾಗಿದ್ದಾರೆ.

ಬೆಳಗಾಂವ ಜಿಲ್ಲೆಯ ಅಥಣಿ ತಾಲೂಕಿನ 'ಐನಾಪುರ' ಗ್ರಾಮದ ಶ್ರೀ ಸಾತಪ್ಪ ಮತ್ತು ಸರಸ್ವತಿ ದೇವಿಯರ ಪುಣ್ಯೋದರದಲ್ಲಿ ವೀರನಿರ್ವಾಣ ೨೪೨೦ರ ಕಾರ್ತಿಕ ಶುಕ್ಲಪಕ್ಷ ದ್ವಿತೀಯ ದಿನದಂದು ಜನಿಸಿದ 'ರಾಮಚಂದ್ರ'ನು ಬೆಳೆದು ದೊಡ್ಡವನಾದ. ಯಾವ ಕಾರಣದಿಂದಲೋ ಶಿಕ್ಷಣದಿಂದ ವಂಚಿತನಾಗಿ ಕೃಷಿ ಕೆಲಸದಲ್ಲಿಯೇ ಮುಂದುವರಿದನು. ಈ ಊರಿಗೆ ಚಾರಿತ್ರ ಚಕ್ರವರ್ತಿ ಆಚಾರ್ಯ ಶಾಂತಿಸಾಗರರು ವಿಹಾರ ಮಾಡುತ್ತ ಆಗಮಿಸಿದರು. ಹೊಲದಲ್ಲಿ ಕೆಲಸ ಮಾಡುತ್ತಿದ್ದ ತರುಣ ನಿರಕ್ಷರಿಯಾದ ರಾಮಚಂದ್ರನು ದೂರದಿಂದಲೇ ಮುನಿಗಳನ್ನು ನೋಡಿದನು. ಮನೆಗೆ ಬಂದವನೇ ಬಸದಿಗೆ ಹೋಗಿ ಆಚಾರ್ಯ ಶ್ರೀಗಳಿಗೆ ನಮಸ್ಕರಿಸಿ ಕುಳಿತುಕೊಂಡ. ಯಥಾಜಾತರೂಪಧರರಾದ, ವೀತರಾಗ ವಾತ್ಸಲ್ಯಮಯವಾದ ಅವರ ವಾಣಿಯನ್ನು ಕೇಳಿ ಮನಸೋತ. ದರ್ಶನಮಾಡಿ ಧನ್ಯನಾದೆನೆಂದು ಭಾವಿಸಿದ. ಅಗಾಧವಾದ ಅವರ ವಿದ್ವತ್ತು ಹಾಗೂ ಚಾರಿತ್ರವನ್ನು ಸಮೀಪದಿಂದ ಅವಲೋಕಿಸಿದ. ಅವರ ಸಾಮೀಪ್ಯದಲ್ಲಿಯೇ ಇರತೊಡಗಿದ. ಅವರ ಸೇವೆ ಮಾಡತೊಡಗಿದ. ಶಿಷ್ಯರಲ್ಲಿಯೇ ಪ್ರಿಯ ಶಿಷ್ಯನಾದ ರಾಮಚಂದ್ರ.

ಆಚಾರ್ಯ ಶಾಂತಿಸಾಗರರು ವಿಹಾರ ಬೆಳೆಸಿದಾಗ ಇವನೂ ಅವರ ಜೊತೆಯಲ್ಲಿ ಶಿಷ್ಯನಾಗಿ ತೆರಳಿದ. ಸೂಕ್ಷ್ಮವಾಗಿ ಆಚಾರ್ಯಶ್ರೀಗಳ ಧ್ಯಾನ, ಅಧ್ಯಯನ, ಚಾರಿತ್ರಗಳನ್ನು ದಿನಾಲು ಗಮನಿಸುತ್ತಲೇ ಇದ್ದ. ತಾನೂ ಅವುಗಳನ್ನು ರೂಢಿಸಲು ಮರೆಯಲ್ಲಿಯೇ ಪ್ರಯತ್ನಿಸುತ್ತಿದ್ದ. ಇವನ ಮನಸ್ಸಿನಲ್ಲಿ ತುಡಿತ ಹೆಚ್ಚಾಯಿತು. ಕೊನೆಗೆ ಧೈರ್ಯ ಮಾಡಿ ವಿನಯಪೂರ್ವಕವಾಗಿ 'ಪೂಜ್ಯರೇ, ನನಗೂ ಮೋಕ್ಷಮಾರ್ಗದ ಕಾರಣವಾದ ಹಾಗೂ ಪವಿತ್ರವಾದ ದೀಕ್ಷೆಯನ್ನು ಅನುಗ್ರಹಿಸಿರಿ' ಎಂದು ಬೇಡಿಕೊಂಡ. ಇವನ ಹಂಬಲವನ್ನು ಹಾಗೂ ಜ್ಞಾನ ಚಾರಿತ್ರಗಳನ್ನು ಅವಲೋಕಿಸಿದ ಆಚಾರ್ಯಶ್ರೀಗಳು ಒಂದು ದಿವಸ ಶುಭಮುಹೂರ್ತದಲ್ಲಿ 'ರಾಮಚಂದ್ರ'ನಿಗೆ ದೀಕ್ಷೆಯನ್ನು ದಯಪಾಲಿಸಿ 'ಕುಂಥುಸಾಗರ' ರೆಂದು ಹೆಸರಿಟ್ಟರು. ಕುಂಥುಸಾಗರರು ಕನ್ನಡ ಭಾಷೆಯ ಜೊತೆಗೆ ಹಿಂದಿ, ಸಂಸ್ಕೃತ, ಗುಜರಾಥಿ, ಮರಾಠಿ ಮುಂತಾದ ಭಾಷೆಗಳನ್ನು ಕಲಿತರು. ಆಳವಾದ ಆಗಮ ಜ್ಞಾನ ಪಡೆದರು. ಕೆಲಕಾಲದ ನಂತರ ದಿಗಂಬರ



ಮುನಿದೀಕ್ಷೆಯನ್ನು ಪಡೆದರು. ಇವರ ವಿಶೇಷ ಜ್ಞಾನಾರಾಧನೆ ಹಾಗೂ ಸ್ಥಿರಚಾರಿತ್ರದಿಂದ ಆಚಾರ್ಯ ಪದವಿಯನ್ನು ಪಡೆದರು ಇವರ ಶ್ರವಣಬಲ ವಿಶೇಷವಾಗಿತ್ತು. ವಾಕ್‌ಸಿದ್ಧಿ ಪುರುಷರಾಗಿದ್ದರು. ಸದಾ ವಿಶ್ವೋದ್ಧಾರ ಬಯಸುತ್ತಿದ್ದ ಇವರಲ್ಲಿಗೆ ಎಲ್ಲ ಮತವಾದಿಗಳು ಬಂದು ವಿನೀತರಾಗುತ್ತಿದ್ದರು. ಗುಜರಾಥ ಹಾಗೂ ಸೀಮಾರಾಜ್ಯಗಳ ಶ್ರೀಮಂತರು, ಭವ್ಯರು ಮುಂತಾದವರು ಇವರ ಉಪದೇಶ ಕೇಳಲು ಬರುತ್ತಿದ್ದರು. ವೀತರಾಗರೂ, ಪರಮ ನಿಸ್ಪೃಹರೂ, ಗಂಭೀರ ವಿಚಾರಧಾರಿಗಳೂ, ಶಾಂತವೃತ್ತಿಯುಳ್ಳವರೂ ಆದ ಇವರು ಮಹಾತಪೋಮೂರ್ತಿಯಾಗಿದ್ದರು. ಇವರ ಉಪದೇಶ ಕೇಳಿ ಜನತೆ ಇವರ ಚರಣಗಳಿಗೆರಗಿ ಧನ್ಯರಾದೆವೆಂದು ಭಾವಿಸುತ್ತಿದ್ದರು. ಬೋಧಾಮೃತಸಾರ, ಜ್ಞಾನಾಮೃತಸಾರ, ಮುನಿಧರ್ಮಪ್ರದೀಪ, ಶ್ರಾವಕ-ಪ್ರತಿಕ್ರಮಣ, ಮುನಿ ಪ್ರತಿಕ್ರಮಣ, ಭಾವತ್ರಯ ಫಲಪ್ರದರ್ಶೀ ಮುಂತಾದ ಗ್ರಂಥಗಳು ಉತ್ಕೃಷ್ಟ ಶೈಲಿಯಲ್ಲಿ ಇವರಿಂದ ರಚನೆಗೊಂಡವು. ಇವುಗಳಲ್ಲಿ 'ಭಾವತ್ರಯ ಫಲಪ್ರದರ್ಶೀ' ಅತ್ಯಂತ ಮಹತ್ವದ ಗ್ರಂಥವಾಗಿದೆ.

### ಗ್ರಂಥಪರಿಚಯ :-

ಜೀವಿಗೆ ತನ್ನ ಭಾವನೆಗೆ ತಕ್ಕಂತೆ ಭಾವಾಸ್ರವವಾಗುವದು. ಆ ಭಾವಾಸ್ರವಕ್ಕೆ ಸಂಬಂಧಪಟ್ಟ ರಾಗದ್ವೇಷ ವಿಭಾವ ಪರಿಣಾಮಗಳುಂಟಾಗಿ ಇದಕ್ಕೆ ಅನುಗುಣವಾದ ಕರ್ಮರೂಪ ಪರಮಾಣುಗಳು ಆಕರ್ಷಿತಗೊಂಡು ಆತ್ಮಪ್ರದೇಶದಲ್ಲಿ ಒಂದಾಗುವದೇ ಬಂಧವಾಗಿದೆ. ಅನಾದಿಕಾಲದಿಂದ ಭಾವಾಸ್ರವದಿಂದ ದ್ರವ್ಯಾಸ್ರವದ ಉದಯ, ದ್ರವ್ಯಾಸ್ರವದಿಂದ ಭಾವಾಸ್ರವದ ಉದಯ ನಡೆದೇ ಇದೆ. ಅದಕ್ಕಾಗಿ ಭಾವಾಸ್ರವ ಉಂಟಾದಾಗ ಜ್ಞಾತನಾದರೆ ಅಲ್ಲಿ ರಾಗದ್ವೇಷಗಳ ಉದಯವಾಗುವುದಿಲ್ಲ, ಹೊಸಕರ್ಮ ತಟ್ಟುವುದಿಲ್ಲ. ಇದೆ ಕರ್ಮನಿರ್ಜರೆಯ ಮುಖ್ಯ ಉಪಾಯ. ಆತ್ಮನೊಡನೆ ಬಂಧಿಸಿಕೊಂಡ ಕರ್ಮದ ನಿಮಿತ್ತವಾಗಿ ಮುಂದಿನ ಗತಿಯ ಪ್ರಾಪ್ತಿಯಾಗುತ್ತದೆ. ಪ್ರತಿಯೊಂದು ಜೀವವು ವರ್ತಮಾನದಲ್ಲಿ ಮನುಷ್ಯನಾಗಿ ಜನ್ಮ ಪಡೆದಾಗ ಎಲ್ಲರ ಪರಿಣಾಮ ಆಕಾರ, ವಿಚಾರ, ಬಣ್ಣ, ರೂಪ ಮುಂತಾದವುಗಳಲ್ಲಿ ಹೀನಾಧಿಕತೆ ಕಂಡುಬರುತ್ತದೆ. ಕೆಲವರು ಅಂಗಹೀನರಾಗಿಯೂ, ದುಃಖಿಗಳಾಗಿಯೂ, ದರಿದ್ರರಾಗಿಯೂ,

ಮೂಗ, ಮೂಕ, ಕಿವುಡ, ಹೀಗೆ ಇನ್ನು ಅನೇಕ ರೀತಿಯಾಗಿ ಕಂಡು ಬರುತ್ತಾರೆ. ಅನೇಕ ಜೀವಗಳು ಇರುವೆಯಿಂದ ಕಾಗೆ, ಕೋಗಿಲೆ, ಆನೆಯವರೆಗೆ ಅನೇಕ ಪ್ರಾಣಿಗಳಾಗಿಯೂ, ಕೆಲವು ಏಕೇಂದ್ರಿಯದಿಂದ ಪಂಚೇಂದ್ರಿಯಗಳಾಗಿಯೂ ಜನ್ಮ ಪಡೆಯುತ್ತವೆ. ಈ ರೀತಿಯಾಗಿ ಜೀವಿಯು ಬೇರೆ ಬೇರೆ ರೀತಿಯಾಗಿ ಜನ್ಮ ಪಡೆಯಲು ಕಾರಣವೇನಿರಬಹುದೆಂಬುದನ್ನು ಸುಂದರ, ಸರಳ ಹಾಗೂ ಸಮರ್ಪಕವಾಗಿ ಸಂಸ್ಕೃತ ಶ್ಲೋಕಗಳ ಮೂಲಕ ತಿಳಿಸಿದ್ದಾರೆ. ಅದೇ ರೀತಿಯಾಗಿ ವರ್ತಮಾನ ಕಾಲದಲ್ಲಿ ಯಾವ ಯಾವ ಭಾವನೆಗಳನ್ನು ಮಾಡಿದರೆ ಭವಿಷ್ಯದಲ್ಲಿ ಯಾವ ಯಾವ ಗತಿಯಲ್ಲಿ ಜನ್ಮ ಪಡೆಯಬಹುದೆಂಬುದನ್ನು ಕೂಡ ತಿಳಿಸಿದ್ದಾರೆ. ಪುನರ್ ಜನ್ಮದಲ್ಲಿ ನಂಬಿಕೆ ಇರುವ ಪ್ರತಿಯೊಬ್ಬರಿಗೂ ತಮ್ಮ ಗತಿಯ ಬಗ್ಗೆ ಬಹಳ ಕೂತೂಹಲ ಹುಟ್ಟಿಸುವಂಥ ಇದೊಂದು ಮಹತ್ತರ ಕೃತಿಯಾಗಿದೆ. ಭಗವಾನ್ ಶಾಂತಿನಾಥ ತೀರ್ಥಂಕರರ ತರುವಾಯ ಧರ್ಮತೀರ್ಥವನ್ನು ಪ್ರವಹಿಸಿದವರೆಂದರೆ ಭಗವಾನ್ ಕುಂಥುನಾಥ ತೀರ್ಥಂಕರರು. ಅದೇ ರೀತಿಯಾಗಿ ವರ್ತಮಾನ ಕಾಲದಲ್ಲಿ ಮುನಿಪರಂಪರೆಯಲ್ಲಿ ಆಚಾರ್ಯ ಶಾಂತಿಸಾಗರರ ತರುವಾಯ ಅಷ್ಟೇ ಪರಿಣಾಮಕಾರಿಯಾಗಿ, ಪ್ರಭಾವಶಾಲಿಯಾಗಿ ಧರ್ಮತೀರ್ಥವನ್ನು ನಡೆಸಿಕೊಂಡು ಹೋದವರೆಂದರೆ ಆಚಾರ್ಯ ಕುಂಥುಸಾಗರರೆಂದು ಅನೇಕ ಭಕ್ತರು ಉದ್ಗಾರ ತೆಗೆಯುತ್ತಿದ್ದರು. ಇಲ್ಲಿ ತೀರ್ಥಂಕರರ ಹಾಗೂ ಆಚಾರ್ಯರ ಹೆಸರುಗಳಲ್ಲಿಯೂ ಇರುವ ಸಾಮ್ಯತೆ, ಹೋಲಿಕೆಗಳನ್ನು ಕಾಣಬಹುದು. ಆಚಾರ್ಯ ಕುಂಥುಸಾಗರರ ಕಾರ್ಯ ಕ್ಷೇತ್ರವೆಂದರೆ ಗುಜರಾಥರಾಜ್ಯವೆಂದು ಹೇಳುತ್ತಾರೆ. ಅವರ ಜ್ಞಾನಸಂಪತ್ತು, ಪರಿಣಾಮಕಾರಿಯಾದ ವಾಗ್‌ಝರಿ, ಅಪ್ರತಿಮವಾದ ಚಾರಿತ್ರ್ಯವನ್ನು ವರ್ಣಿಸಲಸಾಧ್ಯ ಶ್ರಾವಕ ಹಾಗೂ ಮುನಿಗಳಿಗೆ ಅವರ ಜೀವನವು ಮಾರ್ಗದರ್ಶನವಾಗಿದೆ, ನಮಗೆಲ್ಲ ದಾರಿದೀಪವಾಗಿದೆ. ಇವರ "ಭಾವತ್ರಯ ಫಲಪ್ರದರ್ಶೀ" ಗ್ರಂಥವು ಸಂಗ್ರಹ ಯೋಗ್ಯವಾಗಿದೆ. ಎಲ್ಲರೂ ಓದಿ ಜೀವನದಲ್ಲಿ ಧನ್ಯತೆ ಪಡೆಯಲು ಅತ್ಯಂತ ಮಹತ್ವದ ಗ್ರಂಥವಾಗಿದೆ.

# ಭಾವತ್ರಯ ಫಲಪ್ರದರ್ಶೀ

# ಮಂಗಲಾಚರಣಂ

ಜ್ಞಾನಾದಿತ್ಯಂ ಜಿನಂ ನತ್ವಾ ಶ್ರೀದಂ ಸರ್ವಪ್ರಕಾಶಕಂ ।
ಭಕ್ತ್ಯಾ ಶಾಂತಿಸುಧರ್ಮೌಚ ಜ್ಞಾನಂ ವೈರಾಗ್ಯವರ್ಧಕೌ ॥ ೧ ॥

ಭಾವತ್ರಯಾಣಾಂ ಹಿ ಫಲಪ್ರದರ್ಶೀ,
ಗ್ರಂಥೋಽಮಯಾಯಂ ಸಕಲಾತ್ಮಶುದ್ಧ್ಯತೆ ।
ವಿರಚ್ಯತೆ ಸ್ವಾತ್ಮರತೇನ ಶುದ್ಧ್ಯಾ,
ಶ್ರೀಕುಂಥುನಾಮ್ನಾವರ ಸೂರಿಣೇತಿ ॥ ೨ ॥

ಅರ್ಥ :- ಆತ್ಮಜ್ಞಾನವನ್ನು ಪ್ರಕಾಶಪಡಿಸುವುದರಲ್ಲಿ ಸೂರ್ಯನಂತಿರುವವರೂ, ಅಂತರಂಗ ಬಹಿರಂಗ ಲಕ್ಷ್ಮೀದಾಯಕರೂ, ಸಕಲ ತತ್ವಗಳನ್ನು ಪ್ರಕಾಶಪಡಿಸುವವರೂ ಆದ ಭಗವಾನ ಸರ್ವಜ್ಞ ದೇವರನ್ನು ವಂದಿಸಿ, ವೈರಾಗ್ಯಭಾವನೆಯನ್ನು ವೃದ್ಧಿಗೊಳಿಸಿ ಜೈನೇಶ್ವರೀ ದೀಕ್ಷೆಯನ್ನಿತ್ತಿರುವ ಆಚಾರ್ಯಪ್ರವರರಾದ ದೀಕ್ಷಾಗುರು ಶ್ರೀ ಶಾಂತಿಸಾಗರ ಮಹಾಯೋಗಿಗಳನ್ನು ವಂದಿಸುತ್ತೇನೆ. ಹಾಗೇ ಜ್ಞಾನವನ್ನು ವೃದ್ಧಿಗೊಳಿಸುವ ವಿದ್ಯಾಗುರುಗಳಾದ ಶ್ರೀ ಆಚಾರ್ಯ ಸುಧರ್ಮಸಾಗರ ಮಹಾಮುನಿಗಳನ್ನೂ ಕೂಡ ಭಕ್ತಿಯಿಂದ ವಂದಿಸುತ್ತೇನೆ. ನಂತರ ಆತ್ಮತನ್ಮಯ ಆಚಾರ್ಯ ಕುಂಥುಸಾಗರನಾದ ನಾನು ಮನ, ವಚನ, ಕಾಯಗಳ ಶುದ್ಧತೆಯಿಂದ ಸಕಲ ಭವ್ಯಜೀವಿಗಳ ಆತ್ಮ ಶುದ್ಧಿಗೋಸ್ಕರ ಮೂರುವಿಧ ಭಾವ (ಅಶುಭ, ಶುಭ, ಶುದ್ಧ)ಗಳ ಫಲಗಳನ್ನು ಪ್ರಕಟಪಡಿಸುವ ಈ ಗ್ರಂಥವನ್ನು ರಚಿಸುವೆನು.

ಭಾವಾರ್ಥ:- ಸಕಲ ಸಂಸಾರದ ಸರ್ವ ಪದಾರ್ಥಗಳನ್ನು ಪ್ರಕಾಶಪಡಿಸುವ ಸೂರ್ಯನೋಪಾದಿಯಲ್ಲಿ ಶುದ್ಧಾತ್ಮಸ್ವರೂಪವನ್ನು ಅಥವಾ ಶುದ್ಧಾತ್ಮನ ಬೋಧವನ್ನು ಪ್ರಕಾಶಗೊಳಿಸಲು ತೀರ್ಥಂಕರ ಪರಮ ಜಿನೇಂದ್ರ ದೇವನಿಂದಲೇ ಸಾಧ್ಯವು. ಭಗವಾನ್ ಸರ್ವಜ್ಞದೇವನು ತನ್ನ ಅಗಾಧ ತಪೋಮಹಿಮೆಯ ಪ್ರಭಾವದಿಂದ ನಿಜವಾದ ಆತ್ಮಜ್ಞಾನವನ್ನು ಪ್ರಾಪ್ತಮಾಡಿಕೊಂಡು ಸರ್ವದರ್ಶೀ ಸರ್ವಜ್ಞದೇವನಾಗಿ ಪರಮ ವೀತರಾಗಿಯಾಗಿರುವನು. ಆದ್ದರಿಂದ ಸರ್ವಜ್ಞದೇವನು ಆತ್ಮಜ್ಞಾನದ ಸ್ವರೂಪವನ್ನು ಪೂರ್ಣರೀತ್ಯಾ ಉಪದೇಶವಿತ್ತಿರುವನು. ಸತ್ಯಾರ್ಥ ಸ್ವರೂಪೋಪದೇಶಕನಾಗಿರುವುದರಿಂದಲೇ ವೀತರಾಗ, ಜ್ಞಾನಭಾನು ಎಂದು ಹೇಳಿಸಿಕೊಂಡಿರುವುದು ಮಾತ್ರವಲ್ಲ ಆ

ಸರ್ವಜ್ಞದೇವನು ಅನಂತಜ್ಞಾನ, ಅನಂತದರ್ಶನ, ಅನಂತಸುಖ ಮತ್ತು ಅನಂತ ವೀರ್ಯಗಳೆಂಬ ಅನಂತ ಚತುಷ್ಟಯರೂಪದ ಅಂತರಂಗಲಕ್ಷ್ಮಿಗೆ ಅಧಿಪತಿಯಾಗಿ ಭವ್ಯಜೀವಿಗಳಿಗೆ ಉತ್ತಮ ಫಲದಾಯಕನಾಗಿರುವನು. ಇಲ್ಲಿ 'ದಾಯಕ' ಎಂದರೆ ಕೊಡುವುದೆಂದರ್ಥವಲ್ಲ, ಕಿಂತು ಸರ್ವಜ್ಞ ಜಿನೇಂದ್ರನಾದ ಪರಮಾತ್ಮನಲ್ಲಿ ಭಕ್ತಿ, ಸ್ಮರಣೆ, ಧ್ಯಾನ ಮಾಡುವುದರಿಂದಲೇ ಭವ್ಯಜೀವಿಗಳು ತಮ್ಮ ಕರ್ಮಗಳನ್ನು ನಾಶಮಾಡಿ ಸ್ವಯಂ ಸರ್ವಜ್ಞರಾಗುವರೆಂದು ಭಾವವು. ಪರಮಾತ್ಮನ ಗುಣಸ್ಮರಣ ಧ್ಯಾನಾದಿಗಳನ್ನು ಮಾಡದಿದ್ದರೆ ಕರ್ಮಗಳು ಆತ್ಮನನ್ನು ಬಿಟ್ಟು ಎಂದಿಗೂ ಹೋಗಲಾರವು. ಕರ್ಮಗಳು ವಿಧ್ವಂಸವಾಗದೆ ತೀರ್ಥಂಕರ ಪದವಿಯೂ ಕೂಡ ಪ್ರಾಪ್ತವಾಗಲಾರದು. ಹೀಗೆ ಯಾರು ಜಿನೇಂದ್ರ ಪದವಿಯನ್ನು ಪಡೆದಿರುವರೋ ಅವರು ಜಿನೇಶ್ವರನ ಗುಣಧ್ಯಾನಗೈದವರೆ, ಆದ್ದರಿಂದ ಆ ಅನಂತ ಚತುಷ್ಟಯ ರೂಪಲಕ್ಷ್ಮಿಯನ್ನು ಅಥವಾ ಜಿನೇಂದ್ರ ಪದವಿಯನ್ನೀಯುವ ಜಿನೇಂದ್ರನೆಂದು ಸಂಬೋಧಿಸಿರುವುದು. ಹಾಗೆಯೇ ಸರ್ವಜ್ಞರಾಗಿರುವುದರಿಂದಲೂ ಸರ್ವದರ್ಶಿಗಳಾಗಿರುವುದರಿಂದಲೂ ಜೀವ-ಅಜೀವ ; ರೂಪೀ-ಅರೂಪೀ ಇವೇ ಮೊದಲಾದ ಸಮಸ್ತ ತತ್ವಗಳನ್ನು ಜಿನೇಂದ್ರರು ಪ್ರಕಾಶಪಡಿಸುವವರಾಗಿರುತ್ತಾರೆ. ಅಂತಹ ತೀರ್ಥಂಕರ ಪರಮ ಜಿನೇಂದ್ರನನ್ನು ಭಕ್ತಿಭಾವದಿಂದ ವಂದಿಸುತ್ತೇನೆ. ಅನಂತರ ದೀಕ್ಷಾಗುರು, ಮತ್ತು ವಿದ್ಯಾಗುರುಗಳಾದ ಆಚಾರ್ಯದ್ವಯರಿಗೂ ನಮಸ್ಕರಿಸುತ್ತೇನೆ. ಹಾಗೆ ಸಕಲ ವಿಘ್ನಗಳ ಶಾಂತಿಗಾಗಿ ದೇವಗುರುಗಳನ್ನು ನಮಿಸಿ ಈ ಗ್ರಂಥ ರಚನೆಯ ಕಾರ್ಯವನ್ನು ಪ್ರಾರಂಭಿಸುತ್ತೇನೆ.

ಈ ಸಂಸಾರದಲ್ಲಿರುವ ಸಕಲ ಸಂಸಾರೀ ಜೀವಿಗಳ ಪರಿಣಾಮವು ಮೂರು ವಿಧವಾಗಿ ಪರಿಣಮಿಸುವುದು. ಅವುಗಳಲ್ಲಿ ಕೆಲವು ಜೀವಗಳ ಪರಿಣಾಮವು ಅಶುಭವಾಗಿಯೂ, ಇನ್ನು ಕೆಲವು ಜೀವಗಳ ಪರಿಣಾಮವು ಶುಭವಾಗಿಯೂ ಮತ್ತೆ ಕೆಲವು ಜೀವಗಳ ಪರಿಣಾಮವು ಶುದ್ಧವಾಗಿಯೂ ಉಂಟಾಗುವುದು. ಈ ಗ್ರಂಥದಲ್ಲಿ ಅಶುಭ, ಶುಭ, ಶುದ್ಧ ಪರಿಣಾಮಗಳ ಫಲಗಳನ್ನು ವರ್ಣಿಸಲ್ಪಡುವುದರಿಂದ ಈ ಗ್ರಂಥಕ್ಕೆ 'ಭಾವತ್ರಯ ಫಲಪ್ರದರ್ಶೀ' ಎಂಬ ನಾಮಧೇಯವು ಸಾರ್ಥಕವಾದುದು. ಮೂರು ಭಾವಗಳ ಫಲಗಳನ್ನರಿತು ಭವ್ಯಜೀವಿಗಳು ಅಶುಭ ಪರಿಣಾಮವನ್ನು ತ್ಯಜಿಸಬೇಕು. ಶುಭಭಾವಗಳನ್ನು ಧರಿಸಿ ಕ್ರಮವಾಗಿ ಶುದ್ಧಭಾವನೆಯ ಅಭ್ಯಾಸದಲ್ಲಿ ಮನಸ್ಸನ್ನಿಟ್ಟು, ಅದನ್ನು ಸಾಧಿಸುತ್ತಾ ಶುಭ ಪರಿಣಾಮವನ್ನು



ಕೂಡಾ ತ್ಯಜಿಸುತ್ತಾ ಕೇವಲ ಶುದ್ಧ ಪರಿಣಾಮವನ್ನು ಧಾರಣೆಮಾಡುವುದೇ ಈ ಗ್ರಂಥರಚನೆಯ ಪ್ರಧಾನ ಉದ್ದೇಶವು. ಮೊದಲನೆಯ ಅಶುಭಪರಿಣಾಮಗಳಿಂದ ಪಾಪಕರ್ಮಗಳ ಆಸ್ರವವು. ಶುಭಪರಿಣಾಮಗಳಿಂದ ಪುಣ್ಯಕರ್ಮಗಳ ಆಸ್ರವವು ಆಗುವುವು. ಪಾಪಕರ್ಮಗಳ ಆಸ್ರವದಿಂದ ನರಕಾದಿದುರ್ಗತಿಗಳು, ಪುಣ್ಯಕರ್ಮಗಳ ಆಸ್ರವದಿಂದ ಸ್ವರ್ಗಾದಿ ಸುಖಗಳುಂಟಾಗುತ್ತವೆ. ಆದರೆ ನರಕ, ಸ್ವರ್ಗಾದಿಗಳಲ್ಲಿ ಭ್ರಮಿಸುವುದೂ ಕೂಡಾ ಸಂಸಾರವೇ ಆಗಿರುತ್ತದೆ. ಸಂಸಾರ ತ್ಯಾಗವು ಶುದ್ಧ ಪರಿಣಾಮದಿಂದಲೇ ಸಾಧ್ಯವು. ಆದ್ದರಿಂದ ಶುಭ ಪರಿಣಾಮಗಳನ್ನು ಕೂಡಾ ತ್ಯಜಿಸಿ ಶುದ್ಧ ಪರಿಣಾಮವನ್ನು ಧಾರಣೆಮಾಡಬೇಕೆಂದು ಬೋಧಿಸಿರುವುದು. ಪ್ರಧಾನಕಾರಣ ಶುದ್ಧಪರಿಣಾಮದಿಂದ ಮೋಕ್ಷ ಪ್ರಾಪ್ತಿಯೂ, ಆತ್ಮನ ಯಥಾರ್ಥವೂ ಹಿತಕಾರಕವೂ ಆಗಿರುತ್ತದೆ. ಅತಃ ಭವ್ಯಾತ್ಮರು ಶುದ್ಧ ಪರಿಣಾಮವನ್ನು ಧಾರಣೆ ಮಾಡಿ ಆತ್ಮಕಲ್ಯಾಣಮಾಡಿಕೊಂಡು ಪರಿಶುದ್ಧರಾಗುವುದು ಈ ಪಾವನ ಗ್ರಂಥದ ಪಠಣಪಾಠಣದ ಸತ್ಫಲವಾಗಿರುತ್ತದೆ.

# ಪ್ರಥಮ ಅಧ್ಯಾಯ

ಇದರಲ್ಲಿ ಅಶುಭೋಪಯೋಗದ ಫಲವನ್ನು ಪ್ರಶ್ನೋತ್ತರರೂಪವಾಗಿ ವರ್ಣಿಸಲ್ಪಡುವುದು.

ಸರ್ವಪ್ರಥಮ ಶೋಕದ ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಪಾಪೋದಯಾನ್ಮೇವದ ದೇವ ಕಸ್ಮಾತ್ ।
ಪ್ರಾಪ್ನೋತಿಶೋಕಂ ಸತತಂ ವ್ಯಥಾದಮ್ ॥

ಅರ್ಥ :- ಹೇ ದೇವ ! ಈ ಸಂಸಾರೀಜೀವನ ಯಾವ ಪಾಪಕರ್ಮದ ಉದಯದಿಂದ ಸದಾಕಾಲವು ದುಃಖವನ್ನುಂಟುಮಾಡುವ ಶೋಕವುಂಟಾಗುವುದೆಂಬುದನ್ನು ದಯವಿಟ್ಟು ಹೇಳಬೇಕು.

ಉತ್ತರ :- ಶೋಕೇನ ದಗ್ಧಾನ್ ಮನುಜಾನ್ ವಿಲೋಕ್ಯ ।
ವಾ ದ್ವೇಷಬುಧ್ಯಾ ಪರಿಪೀಡಯಿತ್ವಾ ॥
ಉತ್ಪಾದ್ಯ ವೈರಂ ಹೃದಿಯಶ್ಚತುಷ್ಯೇತ್ ।
ಪ್ರಾಪ್ನೋತಿ ಶೋಕಂ ಮನುಜಃ ಸ ಪಶ್ಚಾತ್ ॥ ೩ ॥

ಅರ್ಥ :- ಯಾವ ಮಾನವನು ಶೋಕದಿಂದ ಸಂತಪ್ತರಾದವರನ್ನು ನೋಡಿ ಸಂತುಷ್ಟನಾಗುತ್ತಾನೆಯೋ, ಅಥವಾ ಯಾವುದಾದರೊಂದು ದ್ವೇಷ ಬುದ್ಧಿಯಿಂದ ಪರರಿಗೆ ದುಃಖವನ್ನುಂಟುಮಾಡುವನೋ, ಅಥವಾ ತನ್ನ ಮನಸ್ಸಿನಲ್ಲಿಟ್ಟುಕೊಂಡು ವೈರವಿರೋಧವನ್ನು ಸಾಧಿಸಿ ಸಂತುಷ್ಟನಾಗುವನೋ ಇವೇ ಮೊದಲಾದ ಕಾರ್ಯಗಳನ್ನು ಮಾಡಿರುವುದರ ಫಲವಾಗಿ ಅನಂತರ ಶೋಕಕ್ಕೀಡಾಗುವನು.

ಭಾವಾರ್ಥ :- ಮನುಷ್ಯನಿಗುಂಟಾಗುವ ಶೋಕವಾಗಲಿ, ಸಂತಾಪವಾಗಲಿ, ಅಸಾತವೇದನೀಯ ಕರ್ಮದ ಉದಯದಿಂದಲೇ ಉಂಟಾಗುವುದು. ಇದು ಪರರಿಗೆ ಶೋಕ, ತಾಪಗಳನ್ನುಂಟುಮಾಡುವುದರಿಂದಲೂ ಆಗುವುದು. ಅಥವಾ ದುಃಖ ಶೋಕ ಸಂಕಷ್ಟಗಳಿಂದ ಬಳಲುತ್ತಿರುವ ಜೀವಗಳನ್ನು ಕಂಡು ಸಂತೋಷಪಡುವುದು ಅಥವಾ ಸ್ವಯಂಪರರಿಗೆ ದುಃಖವನ್ನುಂಟುಮಾಡಿಯೋ ಹಿಂಸಿಸಿಯೋ ಹಾನಿಯನ್ನುಂಟುಮಾಡಿಯೋ ಆನಂದಭರಿತ



ನಾಗುತ್ತಾನೆಯೋ ಅಥವಾ ವಿರೋಧವನ್ನು ಸಾಧಿಸಿ ಪ್ರಸನ್ನಮನಸ್ಕರಾಗುವ ಜೀವಗಳಿಗೆ ಅಸಾತವೇದನೀಯ ಕರ್ಮದ ಆಸ್ರವವಾಗುವುದು. ನಂತರ ಅಸಾತವೇದನೀಯ ಕರ್ಮದ ಬಂಧವಾಗುವುದು. ಆ ಬಂಧವಾದ ಕರ್ಮವು ಉದಯಕ್ಕೆ ಬರುವಾಗ ಅದರಿಂದ ಆ ಜೀವನಿಗೆ ಘೋರ ದುಃಖವೂ ಶೋಕವೂ ಸಂತಾಪಗಳೂ ಉದ್ಭವಿಸುವುವು. ಈ ವಿಷಯಗಳನ್ನು ತಿಳಿದು ಪ್ರತಿಯೊಬ್ಬ ಜೀವನು ಯಾವ ಜೀವಗಳಿಗೂ ಉಪದ್ರವವನ್ನು, ದುಃಖವನ್ನು ಎಸಗಬಾರದು. ಇದೇ ಆತ್ಮ ಸುಖದ ಸರ್ವೋತ್ತಮ ಉಪಾಯವಾಗಿರುತ್ತದೆ.

ಇನ್ನು ನಿರ್ಧನತೆಗೆ ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕರ್ಮೋದಯಾದ್ದೇವ ಧನೇನಹೀನಃ ।
ಕಸ್ಮಾತ್ತ್ವಭೋಽಯಂ ಭವತೀಹ ಜೀವಃ ॥

ಅರ್ಥ :- ಹೇ ಪ್ರಭೂ ! ಯಾವ ಕರ್ಮದ ಉದಯದಿಂದ ಈ ಸಂಸಾರೀ ಜೀವನು ಧನಹೀನನಾಗುವುದೆಂಬುದನ್ನು ದಯವಿಟ್ಟು ಹೇಳಬೇಕು.

ಉತ್ತರ :- ವ್ಯಯಂ ಸುಪಾತ್ರೆ ನ ಧನಸ್ಯಕೃತ್ವಾ
ಹಟಾದ್ಧನಂ ಯಶ್ಚ ಪರಸ್ಯಹೃತ್ವಾ ।
ತುಷ್ಯೇತ್ಪರಂ ವಾ ಕೃಪಣಾಂಚದೃಷ್ಟ್ವಾ
ಹೀನೋ ಧನೈಶ್ಚಾನ್ಯಭವೇ ಭವೇತ್ಸಃ ॥ ೪ ॥

ಅರ್ಥ :- ಯಾವ ಪುರುಷನು ಸತ್ಪಾತ್ರಕ್ಕೆ ತನ್ನ ಸಂಪತ್ತನ್ನು ಉಪಯೋಗಿಸಿಲ್ಲವೋ ಅಥವಾ ಪರರ ದ್ರವ್ಯವನ್ನು ಬಲತ್ಕಾರ ಪೂರ್ವಕ ಅಪಹರಿಸಿರುವನೋ ಅಥವಾ ಕೃಪಣರನ್ನು ನೋಡಿ ಆನಂದಭರಿತನಾಗಿರುವನೋ ಅಂತಹ ಪುರುಷನು ಮರುಭವದಲ್ಲಿ ನಿಶ್ಚಯವಾಗಿ ನಿರ್ಧನನಾಗಿಯೇ ಜನಿಸುವನು.

ಭಾವಾರ್ಥ :- ಧನದ ಪ್ರಾಪ್ತಿಯು ಸತ್ಪಾತ್ರ ದಾನದಿಂದಲೇ ಆಗುತ್ತದೆ. ಯಾವನು ಸತ್ಪಾತ್ರಗಳಿಗೆ ದಾನವೀಯುವನೋ ಅವನು ಭೋಗ ಭೂಮಿಯಲ್ಲಿಯೇ ಜನಿಸುವನು. ಆ ಭೂಮಿಯಲ್ಲಿ ಧನದ ಚಿಂತೆಯೇ ಇರುವುದಿಲ್ಲವು. ಅಲ್ಲಿಯ ಕಲ್ಪವೃಕ್ಷಗಳು ಇಷ್ಟಾರ್ಥವನ್ನು ಈಡೇರಿಸುತ್ತವೆ. ಮಾತ್ರವಲ್ಲ, ಪಾತ್ರದಾನವು ಸ್ವರ್ಗವನ್ನೀಯುವ ವರಹಸ್ತವಾಗಿರುತ್ತದೆ. ಅಲ್ಲಿಯೂ ಕೂಡಾ

ಧನ ಸಂಪತ್ತಿಯ ಪ್ರಶ್ನೆಯಾಗಲಿ ಇಲ್ಲವು. ಮನೋವಾಂಛಿತ ಫಲಗಳನ್ನೀಯುವ ಕಲ್ಪವೃಕ್ಷಗಳು, ನಾನಾವಿಧ ವಿಭೂತಿಗಳು ಮತ್ತು ಮಾನಸಿಕ ಆಹಾರವು ಇರುತ್ತದೆ. ದೇವತೆಗಳಿಗೆ ಹೊಟ್ಟೆ ಹಸಿದಾಗ ಅವರ ಕಂಠದಲ್ಲಿದ್ದ ಅಮೃತದ ಪಿಂಡವು ಕರಗಿದೊಡನೆ ಹಸಿವೆ ಪ್ರಶಾಂತವಾಗುವುದು. ಹೀಗೆಯೆ ಸ್ವರ್ಗೀಯರು ಸದಾಕಾಲ ನಿಃಶ್ಚಿಂತೆಯಿಂದಲೇ ಕಾಲವನ್ನು ಕಳೆಯುತ್ತಿರುತ್ತಾರೆ. ಈ ಮಾನವ ಸಂಸಾರದಲ್ಲಿ ನಮಗೆ ಕಾಣುವ ಧನವಂತರು ಐಶ್ವರ್ಯವಂತರೆಲ್ಲರೂ ಪೂರ್ವಜನ್ಮಗಳಲ್ಲಿ ಪಾತ್ರಾದಿಗಳಿಗೆ ಕೊಟ್ಟ ದಾನದ ಫಲವಾಗಿಯೆ ಧನದ ಪ್ರಾಪ್ತಿಯಾಗಿ ಕುಬೇರರೆಂದು ಹೇಳಿಸಿಕೊಳ್ಳುತ್ತಿರುವರು. ಆದ್ದರಿಂದ ಒಂದು ವೇಳೆ ಧನವಂತರು ಮುಂದಿನ ಭವದಲ್ಲಿಯೂ ಧನವಂತರಾಗಬೇಕೆಂದಿದ್ದರೆ ಅವರೆಲ್ಲರೂ ಸದಾಕಾಲ ಪಾತ್ರದಾನ, ಪರೋಪಕಾರಕ್ಕಾಗಿ ತಮ್ಮ ಧನವನ್ನು ಉಪಯೋಗಿಸಬೇಕು. ದಾನಮಾಡುವಾಗಲು ಕೂಡಾ ಪಾತ್ರ, ಅಪಾತ್ರ ಮತ್ತು ಕುಪಾತ್ರಗಳ ವಿಚಾರವಿರುವುದು ಅತ್ಯಾವಶ್ಯಕವಾಗಿರುತ್ತದೆ. ಕುಪಾತ್ರ ಮತ್ತು ಅಪಾತ್ರಗಳಿಗೆ ಇತ್ತ ಧನವು ಉತ್ತಮ ದಾನವೆಂದೆನ್ನಿಸಿಕೊಳ್ಳಲಾರದು. ಮಾತ್ರವಲ್ಲ ಆದರ ಫಲವು ದುಃಖದಾಯಕವೇ ಆಗಿರುತ್ತದೆ. ಅತಃ ಸತ್ಪಾತ್ರಗಳಿಗಿತ್ತ ದಾನವೇ ಉತ್ತಮವೂ, ಶ್ರೇಷ್ಠವೂ ಆಗಿರುತ್ತದೆ. ಅವುಗಳಲ್ಲಿ ರತ್ನತ್ರಯ ಧಾರಣೆಯಿಂದ ಪವಿತ್ರರಾದ ಆತ್ಮರುಗಳಿಗೆ ಉತ್ತಮ ಪಾತ್ರರೆಂದೂ, ವ್ರತಿಗಳಾದ ಶ್ರಾವಕರಿಗೆ ಮಧ್ಯಮ ಪಾತ್ರರೆಂದೂ, ಸಮ್ಯಗ್ದೃಷ್ಟೀ ಅವಿರತ ಶ್ರಾವಕರಿಗೆ ಜಘನ್ಯ ಪಾತ್ರರೆಂದೂ, ಇವರೆಲ್ಲರು ಧರ್ಮಪಾತ್ರರು. ಇವರುಗಳಿಗೆ ಆವಶ್ಯಕತೆಗನುಸಾರವಾಗಿ ದಾನವನ್ನೀಯಬೇಕು. ಮುನಿಪುಂಗವರಿಗೆ ಆಹಾರ ದಾನ, ಶಾಸ್ತ್ರದಾನ, ಪಿಂಚಿ, ಕಮಂಡಲ, ಔಷಧ ದಾನ, ಮೊದಲಾದವುಗಳನ್ನೀಯುತ್ತಿರಬೇಕು. ಐಲಕ, ಕ್ಷುಲ್ಲಕ, ಆರ್ಯಿಕೆ, ಕ್ಷುಲ್ಲಿಕಾ, ಬ್ರಹ್ಮಚಾರೀ ಮೊದಲಾದವರಿಗೆ ಆಹಾರಾದಿಗಳನ್ನು, ವಸ್ತ್ರಾದಿಗಳನ್ನು ಕೊಡಬೇಕು. ಶ್ರಾವಕರಿಗೆ ಆಹಾರಾದಿ ಸಮಾನ ದಾನವನ್ನು ಮಾಡುತ್ತಿರಬೇಕು. ಅಥವಾ ಅವರ ಅವಶ್ಯಕತೆಯನ್ನರಿತು ವಸ್ತುಗಳನ್ನು ಕೊಡಬೇಕು. ಕೆಲ-ಕೆಲವು ಶ್ರಾವಕರಿಗೆ ಧರ್ಮಭಾವನೆಯ ದೃಢತೆಗಾಗಿ ಧನ, ವಸ್ತ್ರ, ಪಾತ್ರಾದಿಗಳನ್ನೂ ಕೂಡಾ ಕೊಡಬೇಕು. ಹೀಗೆ ಧರ್ಮದಲ್ಲಿ ಶ್ರದ್ಧೆಯನ್ನಿಟ್ಟು ದಾನಮಾಡುವುದರಿಂದ ಧನದ ಪ್ರಾಪ್ತಿಯಾಗುವುದು. ಯಾವ ಪುರುಷನು ಧನವಂತನಾಗಿದ್ದರೂ ಕೂಡಾ ಸತ್‌ಪಾತ್ರಗಳ ಕ್ಷೇಮಕ್ಕಾಗಿ ಧನವನ್ನು ವ್ಯಯಮಾಡುವುದಿಲ್ಲವೋ



ಅಂತಹವನ ಧನಸಂಪತ್ತಿಯು ಸುಟ್ಟಹೋದ ಧಾನ್ಯದಂತೆ ವ್ಯರ್ಥವೆಂದೇ ತಿಳಿಯಬೇಕು. ಉದಾ:- ಸುಟ್ಟುಹೋದ ಧಾನ್ಯದಿಂದ ಅಂಕುರೋತ್ಪತ್ತಿಯಾಗದಿರುವಂತೆ ಸತ್ಪಾತ್ರಗಳಿಗೆ ದಾನವೀಯದ ಮಾನವನಿಗೆ ಮುಂದಿನ ಭವದಲ್ಲಿ ಧನಸಂಪತ್ತಿಯು ಪ್ರಾಪ್ತಿಯಾಗಲಾರದು. ಹೀಗೆ ಆತನು ಜನ್ಮ ಜನ್ಮಗಳಲ್ಲಿಯೋ ನಿರ್ಧನ(ದರಿದ್ರ)ನಾಗಿಯೇ ದುಃಖವನ್ನನುಭವಿಸುವನು.

ಯಾವ ಪುರುಷನು ಬಲಾತ್ಕಾರವಾಗಿ ಪರರ ಧನಸಂಪತ್ತಿಯನ್ನು ಅಪಹರಿಸುವನೋ ಅವನೂ ಕೂಡಾ ನಿರ್ಧನನಾಗಿಯೇ ಜನಿಸುವನು. ಏಕೆಂದರೆ ಪರಧನವನ್ನು ಅಪಹರಿಸುವವನು ಸತ್‌ಪಾತ್ರಗಳನ್ನು ಮಾಡಲಾರ. ಆಕಾರ್ಯದೊಂದಿಗೆ ಅಪಹರಿಸಲ್ಪಟ್ಟವನ ಪಾತ್ರದಾನಾದಿ ಪುಣ್ಯಕಾರ್ಯಗಳನ್ನೂ ಕೂಡ ಅಪಹರಿಸಿಕೊಂಡಂತಾಗುತ್ತದೆ. ಅಂತಹ ನೀಚ ಕಾರ್ಯಗಳಲ್ಲಿ ಮಗ್ನನಾದವನು ಹೇಗೆ ತಾನೆ ಧನವಂತನಾಗುವನು? ಎಂದಿಗೂ ಇಲ್ಲ; ದುರ್ಲೋಭಿಯಾದವರನ್ನು ನೋಡಿ ಸಂತೋಷಪಡುವವನೂ ಕೂಡ ನಿರ್ಧನ, ದರಿದ್ರನಾಗುವನು. ದಾನಧರ್ಮಾದಿ ಕಾರ್ಯಗಳಲ್ಲಿ ತನ್ನ ಧನ ಸಂಪತ್ತಿಯನ್ನು ಉಪಯೋಗಿಸದವನು, ಕೃಪಣ, ಲೋಭಿಯೆಂದು ಹೇಳಿಸಿಕೊಳ್ಳುವನು. ಅಂತಹ ಸ್ವಭಾವವುಳ್ಳ ಕೃಪಣನನ್ನು ಕಂಡು ದಾನಿ ಪುರುಷನು ಎಂದಿಗೂ ಸಂತೋಷಪಡಲಾರನು. ಕೃಪಣನನ್ನು ಕಂಡು ಕೃಪಣನೇ ಸಂತೋಷಪಡುವುದಲ್ಲದೆ ಬೇರೆ ಯಾರೂ ಸಂತೋಷಪಡುವುದಿಲ್ಲ. ಕೃಪಣರನ್ನು ಕಂಡು ಸಂತೋಷಪಡುವ ಮಾನವನು ಮರಣಾನಂತರ ನಿರ್ಧನನಾಗಿಯೇ ಜನಿಸುತ್ತಾನೆ.

ಧನದ ಗತಿ, ಮೂರು ವಿಧವಾಗಿರುತ್ತದೆ. ಮೊದಲನೆಯ ಗತಿ ದಾನ, ಎರಡನೇ ಗತಿ ಭೋಗ ಮತ್ತು ಮೂರನೆಯ ಗತಿ ನಾಶ. ಹೀಗೆ ಮೂರು ಮಾರ್ಗಗಳು. ಇವುಗಳಲ್ಲಿ ದಾನಮಾಡುವುದು ಸರ್ವೋತ್ತಮಮಾರ್ಗ. ಕೇವಲ ಭೋಗೋಪಭೋಗಗಳಲ್ಲಿ ವ್ಯಯಗಳಿಸುವುದು ಮಧ್ಯಮ ಮಾರ್ಗ, ಮತ್ತೆ ಧನವನ್ನು ದಾನಮಾಡಲಾರ, ಭೋಗಿಸಲಾರ, ಇಂಥವನ ಧನಸಂಪತ್ತಿಯ ಗತಿಯು ಮೂರನೇ ಗತಿಯು, ಅರ್ಥಾತ್ ನಾಶವೇ. ಆದ್ದರಿಂದ ಧನವಂತ ಐಶ್ವರ್ಯವಂತನಾಗಿದ್ದು ದಾನ, ಧರ್ಮಕಾರ್ಯಗಳನ್ನು ಮಾಡಿಕೊಂಡರೆ

ನಿರ್ಧನತೆಯ ದಾರುಣ ದುಃಖವು ತಮ್ಮ ಪಾಲಿಗೆ ಇಲ್ಲವೆಂದು ನಿಶ್ಚಯಿಸಿಕೊಳ್ಳಬೇಕು.

ಇನ್ನು ಮುಂದಕ್ಕೆ ಅನಾದರಣೆಗೆ ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ:- ಪಾಪೋದಯಾನ್ಮೆವದ ದೇವ ಕಸ್ಮಾ - ।
ದನಾದರಃ ಕೌ ಭವತೀಹ ಜಂತೋಃ ॥

ಅರ್ಥ :- ಕೃಪಾಸಿಂಧೋ ! ಈ ಜೀವನು ಯಾವ ಪಾಪ ಕರ್ಮದ ಉದಯದಿಂದ ಅಥವಾ ಎಂಥ ಪಾಪ ಕಾರ್ಯದ ಫಲವಾಗಿ ಸಂಸಾರದಲ್ಲಿ ಅನಾದರಕ್ಕೆ ಪಾತ್ರನಾಗುವನೆಂಬುದನ್ನು ಕೃಪೆಮಾಡಿ ಹೇಳಬೇಕು.

ಉತ್ತರ :- ಪುರಾಭವೇ ದೇವ ಗುರು ಸ್ಮೃತೀನಾಂ,
ಕೃತ್ವಾಽಪಮಾನಂ ಹೃದಿ ಯೊ ಹೃತುಷ್ಯತ್ ।
ತಸ್ಯಾಪಮಾನೋಽಪಿ ಪದೇಪದೇ ಸ್ಯಾ -
ನ್ನಿಂದಾ ಸದಾ ಚಾನ್ಯಭವೇಽಪಕೀರ್ತಿಃ ॥ ೫ ॥

ಅರ್ಥ :- ಯಾವ ಮಾನವನು ಪೂರ್ವಭವದಲ್ಲಿ ದೇವ, ಗುರು ಮತ್ತು ಶಾಸ್ತ್ರಗಳನ್ನು ಅಪಮಾನಗೊಳಿಸಿ ಸಂತೋಷಪಟ್ಟಿರುವನೊ, ಆತನು ಪ್ರತಿಯೊಂದು ಸ್ಥಾನದಲ್ಲಿ ಅಪಮಾನಿತನಾಗುತ್ತಿರುತ್ತಾನೆ. ಅಷ್ಟೇ ಅಲ್ಲ ಸದಾಕಾಲವು ನಿಂದೆಗೆ ಗುರಿಯಾಗುವನು. ಮತ್ತೆ ಮುಂದಿನ ಭವದಲ್ಲಿಯೂ ಅಪಕೀರ್ತಿಗೆ ಭಾಜನನಾಗುತ್ತಾನೆ.

ಭಾವಾರ್ಥ :- ಅನಂತ ಚತುಷ್ಟಯರೂಪ ಅಂತರಂಗ ಲಕ್ಷ್ಮಿಯಿಂದಲೂ, ಸಮವಸರಣಾದಿ ಬಾಹ್ಯ ವಿಭೂತಿಗಳಿಂದಲೂ ವಿಭೂಷಿತನಾದ ಭಗವಾನ್ ತೀರ್ಥಂಕರ ಪರಮ ಜಿನದೇವನಿಗೆ ಯಥಾರ್ಥದೇವನೆಂದೂ, ಆಚಾರ್ಯ, ಉಪಾಧ್ಯಾಯ ಮತ್ತು ಸರ್ವಸಾಧುಗಳಿಗೆ ಸದ್ಗುರುವೆಂದೂ, ವೀತರಾಗ ಸರ್ವಜ್ಞ ಪರಮ ಅರಹಂತದೇವನ ವಾಣಿರೂಪ ಶಾಸ್ತ್ರವನ್ನು, (ತದನುಸಾರ ಗುರುವಚನಕ್ಕೂ ಶಾಸ್ತ್ರ) ಈ ಮೂರು ವಸ್ತುಗಳು ಸಾಕ್ಷಾತ್ ಮೋಕ್ಷ ಸುಖಕ್ಕೆ ಕಾರಣೀಭೂತವಾಗಿರುತ್ತವೆ. ಇವನ್ನು ನಿಂದಿಸುವುದು,



ಅಪಮಾನಿಸುವುದೆಂದರೆ ಮೋಕ್ಷವನ್ನೇ ನಿಂದಿಸುವಂತಾಗುತ್ತದೆ. ಇಂತಹ ಮಹಾನುಭಾವರ ನಿಂದೆಯ ಫಲವಾಗಿ ಹೆಜ್ಜೆ-ಹೆಜ್ಜೆಗೂ ತನಗೆ ನಿಂದೆ, ಅಪಮಾನಗಳೇ ತಲೆದೋರುವುವು. ಮಾತ್ರವಲ್ಲ, ಪರಲೋಕದಲ್ಲಿಯೂ ದುಃಖದಾಯಕ ದುರ್ಗತಿಯನ್ನು ಪಡೆಯುವನು.

ಭಗವಾನ್ ಅರಹಂತ ದೇವನು ಸಮವಸರಣದಲ್ಲಿಯೂ ಕೂಡಾ ಆಹಾರವನ್ನು ಭುಂಜಿಸುತ್ತಾನೆ, ಮಲ-ಮೂತ್ರಾದಿಗಳನ್ನು ವಿಸರ್ಜಿಸುತ್ತಾನೆ, ಅವರಿಗೆ ಪರೀಷಹಗಳುಂಟಾಗುತ್ತವೆಂದು ಅಪಪ್ರಚಾರ, ನಿಂದೆಗೈಯುವುದು, ದಿಗಂಬರ ಮಹಾಯೋಗಿಗಳನ್ನು ನೋಡಿ ಹಾಸ್ಯ ಮಾಡುವುದು, ಅಶ್ಲೀಲ ವಚನಗಳನ್ನಾಡುವುದು, ಅವರಲ್ಲಿ ವಿನಯವಿಲ್ಲದಿರುವಿಕೆಯೂ, ಅವರ ದರ್ಶನ ಮಹಾಪಾತಕ ರೂಪವಾಗಿರುವುದೆಂದೂ, ಅವರಲ್ಲಿ ದ್ವೇಷ ಮತ್ಸರದಿಂದ ಅಪಶಬ್ದಗಳನ್ನಾಡುವುದು, ಯಾರಾದರು ಅವರ ಸೇವೆ, ಶುಶ್ರೂಷೆ ಮಾಡುತ್ತಿದ್ದರೆ ವಿಘ್ನಮಾಡುವುದು, ಚರ್ಯೆಗೆ ಹೋಗುವಾಗ, ವಿಹಾರಕ್ಕೆ ಹೊರಟಾಗ ಬಾಯಿಗೆ ಬಂದಂತೆ ಬೈಯುವುದು, ಇವೆಲ್ಲವೂ ಗುರುನಿಂದೆ ಎನ್ನಿಸಿಕೊಳ್ಳುವುದು. ಮತ್ತೆ ಶಾಸ್ತ್ರದಲ್ಲಿ ವರ್ಣಿತ ವಿಷಯಗಳು ಜನರನ್ನು ಮೋಸಗೊಳಿಸುವ ಅಸತ್ಯ ವಿಷಯವಾಗಿರುವುದೆಂದೂ, ಅಧ್ಯಾತ್ಮವಾದವಾಗಲೀ, ತತ್ವವಾದವಾಗಲೀ, ಸರಿಯಾಗಿದ್ದರೂ ಇರಬಹುದು ಆದರೆ ಕ್ರಿಯಾಕಾಂಡ, ವ್ಯವಹಾರ ಚಾರಿತ್ರಗಳ ನಿರೂಪಣೆಯಾಗಲೀ, ತ್ಯಾಗ, ಮಾರ್ಯದೆಗಳ ಕಥನವಾಗಲೀ, ದಾನ, ಪೂಜೆ ಮೊದಲಾದ ಪ್ರಕರಣಗಳು ಸತ್ಯವಾದವುಗಳೆಂದು ಹೇಳಲು ಸಾಧ್ಯವಿಲ್ಲವೆಂದು ಪೂಜಾ ಕಾರ್ಯಗಳಲ್ಲಿ ಪಂಚಾಮೃತಾಭಿಷೇಕಾದಿ ವಿಧಾನಗಳು ತತ್ಕಾಲದಲ್ಲಿ ಉಂಟುಮಾಡಿರುವುದೆಂದೂ, ಫಲ-ಪುಷ್ಪಾದಿಗಳನ್ನಿಟ್ಟುಕೊಂಡು ಪೂಜೆಮಾಡುವುದು ಈಗಿನ ಕಾಲದಲ್ಲಿ ಯೋಗ್ಯವಲ್ಲವೆಂದೂ ಪ್ರಚಾರಮಾಡುವುದು ಜಿನಾಗಮದ ಮಹಾನಿಂದೆಯೆನ್ನಿಸಿಕೊಳ್ಳುವುದು. ಈ ಪ್ರಕಾರವಾಗಿ ದೇವ, ಶಾಸ್ತ್ರ ಮತ್ತು ಗುರುಗಳ ಅಪಮಾನ ಮಾಡುವ ಘೋರ ಪಾಪದ ಫಲವಾಗಿ ಇಹ ಲೋಕದಲ್ಲಿಯೂ, ಪರಲೋಕದಲ್ಲಿಯೂ, ಲೋಕಾಪವಾದ, ಅಪಮಾನ, ನಿಂದೆಯ ಘೋರ ದುಃಖವನ್ನನುಭವಿಸುವುದಲ್ಲದೆ ನರಕಾದಿ ದುರ್ಗತಿಗಳಿಗೆ ಗುರಿಯಾಗುವನು.

ಆದ್ದರಿಂದ ಇಂತಹ ಪಾಪಮನೋವೃತ್ತಿಯಿಂದ ರಕ್ಷಣೆ ಹೊಂದಬೇಕಾದರೆ ದೇವ, ಶಾಸ್ತ್ರ, ಗುರುಗಳ ನಿಂದೆ ಅಪಮಾನಮಾಡದಿರುವುದೇ ಆತ್ಮಶಾಂತಿಯ ಸರಳ ಮಾರ್ಗವಾಗಿರುತ್ತದೆ.

ಇನ್ನು ಮುಂದಕ್ಕೆ ದುಷ್ಟ ಸ್ತ್ರೀಯು ಪ್ರಾಪ್ತಿಯಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕರ್ಮೋದಯಾನ್ನೈವದ ದೇವ ಕಸ್ಮಾದ್ ।
ನರಃ ಕುಭಾರ್ಯಾಂ ಲಭತೇಽನ್ಯಲೋಕ ॥

ಅರ್ಥ :- ಹೇ ಸ್ವಾಮಿನ್ ! ಯಾವ ಕರ್ಮದ ಉದಯದಿಂದ ಅಥವಾ ಯಾವ ಪಾಪ ಕಾರ್ಯದ ಫಲವಾಗಿ ಈ ಜೀವನಿಗೆ ದುಷ್ಟಸ್ತ್ರೀಯು ಪ್ರಾಪ್ತಿಯಾಗುವುದೆಂಬುದನ್ನು ದಯವಿಟ್ಟು ವಿವರಿಸಬೇಕು.

ಉತ್ತರ :- ಪತ್ನ್ಯಾಸಮಂ ಯಃ ಕಲಹಂಚ ಕೃತ್ವಾ ।
ನಿಂದಾಂ ಸುನಾರ್ಯಾಶ್ಚ ವಿಧಾಯ ರೋಷಾತ್ ॥
ದೃಷ್ಟ್ವಾಹ್ಯತುಷ್ಯತ್ಕಲ ಕಾರಿಣೀಂ ಸ್ತ್ರೀಂ ।
ಸ ದುಷ್ಟಭಾರ್ಯಾಂ ಲಭತೇಽನ್ಯಲೋಕ ॥ ೬ ॥

ಅರ್ಥ :- ಯಾವ ಮನುಷ್ಯನು ತನ್ನ ಹೆಂಡತಿಯೊಡನೆ ರಾತ್ರಿಹಗಲು ಕಲಹ ಜಗಳವಾಡಿಕೊಂಡಿರುವನೋ, ಯಾವುದೋ ದ್ವೇಷವನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಸದಾಚಾರಿಣೀ ಸ್ತ್ರೀಯರನ್ನು ನಿಂದಿಸಿಕೊಂಡಿರುವನೋ ಅಥವಾ ಜಗಳಗಂಟಿಯರಾದ ಸ್ತ್ರೀಯರನ್ನು ಕಂಡು ಸಂತೋಷಪಡುತ್ತಿರುವನೋ ಆತನು ಮಹಾ ದುಷ್ಟಸ್ವಭಾವದ ಹೆಂಡತಿಯನ್ನೇ ಪಡೆಯುವನು.

ಭಾವಾರ್ಥ :- ಧಾರ್ಮಿಕ ಕಾರ್ಯಗಳಲ್ಲಿ ಸಹಾಯವನ್ನು ನೀಡುವವಳು ಧರ್ಮಪತ್ನಿಯು. ಅವಳಿಲ್ಲದೆ ಪಾತ್ರದಾನಾದಿ ಕಾರ್ಯಗಳ ವ್ಯವಸ್ಥೆಯಾಗಲಿ, ಜಿನ ಪೂಜಾದಿ ಕಾರ್ಯಗಳಲ್ಲಿ ಅತ್ಯಾವಶ್ಯಕಗಳಾದ ನೈವೇದ್ಯ ಮೊದಲಾದ ಅಷ್ಟವಿಧಾರ್ಚನಾದಿ ದ್ರವ್ಯಗಳ ವ್ಯವಸ್ಥೆಯಾಗಲಿ ಆಗುವುದಿಲ್ಲವು. ಅಂತಹ ಧರ್ಮಪತ್ನಿಯೊಡನೆ ಕಲಹಗಳನ್ನಾಡುವುದರಿಂದ ವಿಘ್ನಗಳೇ ತಲದೋರು



ವುವು. ಆದ್ದರಿಂದ ತಮ್ಮ ಪತ್ನಿಯೊಡನೆ ಎಂದಿಗೂ ಜಗಳವಾಡಬಾರದು. ಇದೇ ಪ್ರಕಾರವಾಗಿ ಸದಾಚಾರಿಣೀ ಸ್ತ್ರೀಯರ ನಿಂದೆಗೈಯಬಾರದು ಅಥವಾ ದೋಷಾರೋಪಣೆಗೆ ಗುರಿಪಡಿಸುವುದು ಕೂಡಾ ಮಹಾ ಪಾಪಕ್ಕೆ ಕಾರಣವಾಗಿದೆ. ಯಾವ ಪುರುಷನು ಸದಾಚಾರಿಣೀ ಸ್ತ್ರೀಯರಲ್ಲಿ ಕಲಂಕವನ್ನು ಹೊರಿಸುವನೋ, ಆ ಘೋರ ಪಾಪದ ಫಲವಾಗಿ ಆತನಿಗೆ ಮಹಾ ಕುಲಷಿತ ಸ್ತ್ರೀಯೇ ಸಿಗುವಳು. ಅಥವಾ ಜಗಳವಾಡಿಕೊಂಡಿರುವ ಸ್ತ್ರೀಯರನ್ನು ನೋಡಿ ಪ್ರಸನ್ನವಾಗುತ್ತಿರುವವರಿಗೆ ತಮ್ಮ ದುರ್ಭಾವನೆಯ ಫಲವಾಗಿ ಕಲಹವನ್ನುಂಟುಮಾಡುವ ದುಷ್ಟ ಸ್ತ್ರೀಯ ಪ್ರಾಪ್ತಿಯಾಗುವುದು. ಇಂತಹ ಅಶುಭ ಪರಿಣಾಮಗಳ ಫಲವಾಗಿ ಅದೇ ಸ್ವಭಾವದ ಸ್ತ್ರೀ, ಪುತ್ರ ಮೊದಲಾದವರ ಉಪಲಬ್ಧಿಯಾಗಿ ಸದಾಕಾಲವೂ ಕಲಹ ಜಗಳದ ಸಾಮ್ರಾಜ್ಯದಲ್ಲಿದ್ದು ಘೋರ ದುಃಖವನ್ನನುಭವಿಸಬೇಕಾಗಬಹುದೆಂದು ವಿಚಾರಿಸಿ, ಕಲಹಾದಿಗಳಿಂದ ದೂರವಿರುವುದೇ ಆತ್ಮಹಿತದ ಸಾಧನೆಯಾಗಿರುತ್ತದೆ.

ಇನ್ನು ಮುಂದಕ್ಕೆ ನೀಚ ಪತಿ(ಗಂಡ)ಯ ಪ್ರಾಪ್ತಿಯ ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಪಾಪೋದಯಾನ್ನೈ ವದ ದೇವ ಕಸ್ಮಾತ್ ।
ದುಷ್ಟಂ ಪತಿಂ ಸ್ತ್ರೀ ಲಭತೇಽನ್ಯಲೋಕ ॥

ಅರ್ಥ:- ಎಲೈ ಪ್ರಭುವೇ ಯಾವ ಪಾಪ ಕಾರ್ಯದ ಫಲದ ಉದಯವಾಗಿ ಸ್ತ್ರೀಯರಿಗೆ ದುಷ್ಟ, ನೀಚನಾದ ಗಂಡಂದಿರು ಸಿಕ್ಕುವರೆಂಬುದನ್ನು ದಯವಿಟ್ಟು ಹೇಳಬೇಕು.

ಉತ್ತರ :- ಪತ್ಯಾಸಮಂ ಯಾ ಕಲಹಂಚ ಕೃತ್ವಾಽ ।
ತುಷ್ಯತ್ಕುಶೀಲಂ ಪುರುಷಂ ಹಿ ದೃಷ್ಟ್ವಾ ॥
ದ್ವೇಷ್ಟಿ ಪ್ರಿಯಂ ಸಚ್ಚರಿತಂ ವಿನೀತಂ ।
ದುಷ್ಟಂ ಪತಿಂ ಸಾ ಲಭತೇಽನ್ಯಲೋಕೇ ॥ ೭ ॥

ಅರ್ಥ:- ಯಾವ ಸ್ತ್ರೀಯು ತನ್ನ ಗಂಡನೊಡನೆ ಜಗಳವಾಡಿಕೊಂಡು ಸಂತುಷ್ಟಳಾಗಿರುವಳೋ ಅಥವಾ ದುರಾಚಾರಿ, ದುರ್ಜನರನ್ನು ನೋಡಿ

ಆನಂದಿತಳಾಗುತ್ತಿರುತ್ತಾಳೆಯೋ ಅಥವಾ ಸದಾಚಾರಿ, ವಿನಯಶೀಲನಾದ ಗಂಡನೊಡನೆ ದ್ವೇಷ, ಅಸೂಯೆಯನ್ನಿಟ್ಟುಕೊಂಡರೆ ಮುಂದಿನ ಭವದಲ್ಲಿ ದುಷ್ಟ, ನೀಚ ಗಂಡನ ಪ್ರಾಪ್ತಿಯೇ ಆಗುತ್ತದೆ.

ಭಾವಾರ್ಥ :- ಸ್ತ್ರೀಯರಿಗೆ ಪತಿಯು ಪೂಜ್ಯನು. ಆತನ ಸೇವೆ ಮಾಡುವುದು ಪತ್ನಿಯ ಧರ್ಮವೂ ಆಗಿರುತ್ತದೆ. ಪತಿಯ ಸೇವೆ, ಭಕ್ತಿಗಳನ್ನು ಮಾಡುವ ಸ್ತ್ರೀಯರೇ ಪತಿವ್ರತಾ ಸ್ತ್ರೀಯೆಂದು ಹೇಳಿಸಿಕೊಳ್ಳಲು ಅರ್ಹಳು. ಅಂತಹ ಪತಿವ್ರತೆಯು ತನ್ನ ಗಂಡನೊಡನೆ ಜಗಳವಾಡುವುದಿಲ್ಲ. ಜಗಳ ವಾಡುವ ಸ್ತ್ರೀಯು ಪತಿವ್ರತೆಯೆಂದು ಹೇಳಿಸಿಕೊಳ್ಳಲು ಯೋಗ್ಯಳಲ್ಲ. ಅಂತಹ ಸ್ತ್ರೀಯರಿಗೆ ಪರಭವದಲ್ಲಿ ಜಗಳಗಂಟನೂ, ನೀಚನೂ ಆದ ದುಷ್ಟ ಪತಿಯೇ ಸಿಗುವನು. ಇದೇ ಪ್ರಕಾರವಾಗಿ ಯಾವ ಸ್ತ್ರೀಯು ದುರಾಚಾರಿಯಾದ ಪುರುಷರನ್ನು ಕಂಡು ಸಂತೋಷ ಮನಸ್ಕಳಾಗುವಳೋ ಅವಳು ಎಂದಿಗೂ ಪತಿವ್ರತೆಯೆಂದೆನ್ನಿಸಿಕೊಳ್ಳಲಾರಳು. ನಿಜವಾಗಿಯೂ ಪತಿವ್ರತೆಯರು ದುಷ್ಟ, ದುರಾಚಾರಿ ಪುರುಷರನ್ನು ಕಂಡು ಆನಂದ ಪಡುವುದಿಲ್ಲ. ಅಂತಹವರನ್ನು ನೋಡಿ ವ್ಯಥೆಪಡುವುದಲ್ಲದೆ, ಸಂತೋಷಪಡುತ್ತಿದ್ದರೆ ತನ್ನ ಶೀಲಧರ್ಮಕ್ಕೆ ಧಕ್ಕೆ ಉಂಟಾಗುತ್ತದೆ. ಇಂತಹ ದೋಷಯುಕ್ತ ಸ್ತ್ರೀಯರಿಗೆ ಮರುಭವದಲ್ಲಿ ದುಷ್ಟ, ದುರಾಚಾರಿ ಪತಿ(ಗಂಡ)ಯೇ ಸಿಗುವನು.

ಜಗಳ, ಕಲಹ, ಅಸೂಯೆ, ಅವಿಧೇಯಳಿಗೆ ಎರಡನೆ ಭವದಲ್ಲಿ ಮಹಾ ನೀಚ ಗಂಡನೇ ದೊರಕಿ ದುಃಖಕ್ಕೀಡಾಗುವಳು.

ಇನ್ನು ಮುಂದಕ್ಕೆ ಮಲ-ಮೂತ್ರಾದಿಗಳಲ್ಲಿ ಎಂತಹ ಜೀವಗಳ ಉತ್ಪತ್ತಿಯಾಗುವುದೆಂಬುದನ್ನು ಹೇಳುತ್ತಾರೆ.

ಪ್ರಶ್ನೆ :- ಕಸ್ಮಾಚ್ಚ ಕಾರ್ಯಾದ್ ವದ ದೇವ ! ನಿಂದ್ಯೆ ।
ಮಲೇ ಜನಾನಾಂ ಭವತೀಹ ಜನ್ಮ ॥

ಅರ್ಥ :- ಹೇ ಸದ್ಗುರುವೇ ! ದಯಮಾಡಿ ಯಾವ ಯಾವ ಪಾಪ ಕಾರ್ಯಗಳನ್ನು ಎಸಗುವುದರಿಂದ ಮಲ-ಮೂತ್ರಾದಿ ನಿಂದ್ಯ ಪದಾರ್ಥಗಳಲ್ಲಿ ಜನನವಾಗುವುದೆಂಬುದನ್ನು ಅಪ್ಪಣೆಕೊಡಿಸಬೇಕು.



ಉತ್ತರ :- ದುರ್ಗಂಧಯುಕ್ತಂ ಮಲಿನಾನ್ನಪಾನಂ ।
ಮಾಂಸಾದಿಕಂ ಭಕ್ಷಿತಮೇವ ಯೇನ ॥
ಪೀತಂ ತಥಾ ಮದ್ಯರಸಂ ನಿತಾಂತಂ ।
ಸ್ಯಾತ್ತಸ್ಯ ಜನ್ಮಾಪಿ ಮಲೇ ಪಶೂನಾಂ ॥ ೮ ॥

ಅರ್ಥ :- ಯಾವ ಪಶುಬುದ್ಧಿಯುಳ್ಳ ಮಾನವನು ದುರ್ಗಂಧವೂ, ಅತ್ಯಂತಮಲಿನವೂ ಆದ ಅನ್ನಪಾನಾದಿಗಳನ್ನು ಭುಂಜಿಸುತ್ತಿರುವನೋ ಅಥವಾ ಮಹಾ ಮಲಿನವೂ ದುರ್ಗಂಧವೂ ಆದ ಮಾಂಸಾದಿಗಳನ್ನು ಭಕ್ಷಿಸಿಕೊಂಡಿರುವನೋ ಅಥವಾ ಸದಾಕಾಲವೂ ಮದ್ಯ ಸೇವನೆಮಾಡಿಕೊಂಡಿರುವನೋ ಅಂತಹ ಪುರುಷನು ಸತ್ತು, ಪಶುಗಳ ಮಲ-ಮೂತ್ರಾದಿಗಳಲ್ಲಿ ಕ್ರಿಮಿಕೀಟನಾಗಿಯೇ ಜನಿಸುವನು.

ಭಾವಾರ್ಥ :- ಮದ್ಯ, ಮಾಂಸ, ದುರ್ಗಂಧಮಯವಾದ ಅನ್ನಪಾನಾದಿ ಸಮಸ್ತ ಪದಾರ್ಥಗಳು ಮಹಾ ನಿಂದ್ಯವೂ ಮತ್ತು ಅನಂತ ಜೀವ ಯುಕ್ತವೂ ಆಗಿರುತ್ತವೆ. ಇಂತಹ ವಸ್ತುಗಳ ಸ್ಪರ್ಶಮಾತ್ರದಿಂದ ಅವುಗಳಲ್ಲಿರುವ ಅನಂತ ಜೀವಗಳ ಘಾತವಾಗುತ್ತದೆ. ಹೀಗಿರುವಾಗ ಅವನ್ನು ಭಕ್ಷಿಸಿದರೆ ಪಾನಮಾಡಿದರೆ ಕೇಳಬೇಕೆ ? ಮದ್ಯ-ಮಾಂಸಾದಿಗಳನ್ನು ಸೇವಿಸುವ ಪುರುಷನು ಅನಂತ ಜೀವಗಳ ಘಾತಕನಾಗಿ ನರಕಾದಿ ದುರ್ಗತಿಗಳಲ್ಲಿ ಜನಿಸಿ ಘೋರ ದುಃಖವನ್ನು ಅನುಭೋಗಿಸುವನು. ಅಲ್ಲಿಂದ ಪುನಃ ಮಲ-ಮೂತ್ರಾದಿಗಳ ಕ್ರಿಮಿಯಾಗಿ ಜನಿಸಿ, ಪುನಃ ಪುನಃ ನರಕಾದಿ ದುರ್ಗತಿಗೆ ಭಾಗಿಯಾಗುತ್ತಾ ನರಳುವನು. ಆದ್ದರಿಂದ ಮದ್ಯಪಾನಾದಿ ಸೇವನೆಯೂ ಮಲಿನ ಆಹಾರ ಸೇವನೆಯೂ ಮಹಾ ಪಾಪಕ್ಕೆ ಕಾರಣವಾಗಿರುತ್ತದೆ. ಅವೆಲ್ಲವನ್ನು ತ್ಯಜಿಸುವುದೇ ಆತ್ಮಸುಖದ ಸುಲಭೋಪಾಯವಾಗಿರುತ್ತದೆ.

ಇನ್ನು ಮುಂದಕ್ಕೆ ಈ ಜೀವನು ಗೃಹ-ಕುಟುಂಬಾದಿಗಳನ್ನೇಕೆ ತ್ಯಜಿಸಲು ಸಿದ್ಧನಾಗುವುದಿಲ್ಲವೆಂಬುದನ್ನು ವಿವರಿಸುತ್ತಾರೆ.

ಪ್ರಶ್ನೆ :- ಕರ್ಮೋದಯಾನ್ನೆ ವದ ದೇವ ! ಕಸ್ಮಾತ್ ।
ತ್ಯಕ್ತುಂ ನ ಶಕ್ನೋತಿ ನರೋ ಗೃಹಾದಿಂ ॥

**ಅರ್ಥ** :- ಹೇ ಪರಮ ದೇವ ! ಈ ಜೀವಕ್ಕೆ ಯಾವ ಕರ್ಮದ ಉದಯದಿಂದ ಅಥವಾ ಯಾವ ನಿಮಿತ್ತದಿಂದ ಮನೆ-ಕುಟುಂಬಾದಿಗಳ ಬಗ್ಗೆ ಅತಿ ಮಮಕಾರವಾಗುವುದು.

**ಉತ್ತರ** :- ಪುರಾಭವೇ ಯೋ ವಿಷಯೆ ನಿಮಗ್ನೋ ।
ಬಭೂವ ಭಕ್ತ್ಯಾಹಿ ಕುಲಿಂಗಿ ಭಕ್ತಃ ॥
ಪೂರ್ವೋಕ್ತ ಸಂಸ್ಕಾರ ವಶಾನ್ನ ಶಕ್ತೋ ।
ಭವೇತ್ಸ ಮೋಕ್ತುಂ ಗೃಹಬಂಧು ಭಾರ್ಯಾಂ ॥ ೯ ॥

**ಅರ್ಥ** :- ಯಾವ ಮಾನವನು ಮೊದಲಿನ ಅನೇಕ ಜನ್ಮಗಳಲ್ಲಿ ಇಂದ್ರಿಯಗಳ ದಾಸನಾಗಿ, ಕುದೇವ, ಕುಶಾಸ್ತ್ರ ಮತ್ತು ಕುಗುರುಗಳ ಪರಮ ಭಕ್ತನಾಗಿಯೂ ಮತ್ತು ಪೂರ್ವ ಜನ್ಮಗಳ ದುಃಸಂಸ್ಕಾರ ಹಾಗೂ ವಾಸನಾ ಬಲದಿಂದ ತನ್ನ ಮನೆ, ಮಠ, ಬಂಧು, ಬಾಂಧವ, ಪುತ್ರ, ಮಿತ್ರ, ಪತ್ನಿಯರೇ ಮೊದಲಾದವರನ್ನು ಎಂದಿಗೂ ತ್ಯಜಿಸಲಾರನು.

**ಭಾವಾರ್ಥ** :- ಅನಾದಿ ಕಾಲದಿಂದ ಸಂಸಾರಿ ಜೀವಗಳೊಡನೆ ಮೋಹನೀಯ ಕರ್ಮವು ಸಂಬಂಧವನ್ನಿಟ್ಟುಕೊಂಡು ಬರುತ್ತಿರುವುದು. ಆದುದರಿಂದಲೇ ಜೀವನು ಪರ ಪದಾರ್ಥಗಳನ್ನು ತನ್ನವೆಂದು ತಿಳಿಯುತ್ತಿರುತ್ತಾನೆ. ಉದಾ :- ಸಂತಾನವಿಲ್ಲದ ಧನಿಕನೊಬ್ಬನು ಯಾವನಾದರೊಬ್ಬ ನಿರ್ಧನಿಕನ ಮಗನನ್ನು ದತ್ತುಸ್ವೀಕಾರಮಾಡಿಕೊಂಡು ತನ್ನ ಮಗನೆಂದು ಮಾಡಿಕೊಳ್ಳುತ್ತಾನೆ. ಆದರೆ ದತ್ತಕ ತೆಗೆದುಕೊಳ್ಳುವುದಕ್ಕಿಂತ ಮೊದಲು ಆ ನಿರ್ಧನಿಕನ ಮಗನಲ್ಲಿ ಯಾವ ವಿಧವಾದ ಮೋಹವೂ ಇರಲಿಲ್ಲ, ಆ ಮಗನ ಸುಖ ದುಃಖಾದಿಗಳಲ್ಲಿ ಸಹಾನುಭೂತಿಯೂ ಕೂಡಾ ಇರುತ್ತಿರಲಿಲ್ಲ. ಆದರೆ ಆ ಧನಿಕನು ಮನಸಾ ತನ್ನ ಪುತ್ರನೆಂದು ಭಾವಿಸಿದ ಸಮಯದಿಂದಲೇ ಅವನಿಗೆ ತನ್ನ ಸರ್ವಸ್ವವನ್ನೇ ಸಮರ್ಪಿಸಲು ಸಿದ್ಧನಾಗುತ್ತಾನೆಯೋ, ಆ ದಿವಸದಿಂದ ದಂಪತಿಗಳು ಆತನ ಸೇವೆ-ಶುಶ್ರೂಷಮಾಡಿಕೊಂಡಿರುತ್ತಾರೆ. ಆ ಮಗನಿಗೆ ಸ್ವಲ್ಪ ದುಃಖವಾಯಿತೆಂದರೆ ಅವರಿಬ್ಬರೂ ದುಃಖಿಗಳಾಗುತ್ತಾರೆ. ಆತನ ರೋಗ ನಿವಾರಣೆಗಾಗಿ ಸಹಸ್ರಾರು ರೂಪಾಯಿಗಳನ್ನು ಖರ್ಚುಮಾಡುತ್ತಾರೆ.



ಇದೆಲ್ಲವೂ ಆ ಅನ್ಯರ ಮಗನನ್ನು ತನ್ನ ಮಗನೆಂದು ಭಾವಿಸಿರುವುದು ಮೋಹ ರಾಜನ ಪ್ರಭಾವದ ಫಲವಾಗಿರುತ್ತದೆ. ಈ ಮೋಹನೀಯ ಕರ್ಮ ಪ್ರಭಾವದಿಂದಲೇ ಜೀವರುಗಳು ನಾನಾ ಪ್ರಕಾರವಾದ ಪಾಪ ಕರ್ಮಗಳನ್ನು ಮಾಡುವುದರಲ್ಲಿ ಹಿಂಜರಿಯುವುದಿಲ್ಲ. ಹೀಗಿರುವಾಗ ಅದನ್ನು ತ್ಯಜಿಸಲು ಧೈರ್ಯ ಮನೋಭಾವನೆಯುಂಟಾಗುವುದಿಲ್ಲ. ಯಾವ ಧನಿಕನು ಯಾರ ಪುತ್ರನನ್ನು ದತ್ತು ಸ್ವೀಕಾರಮಾಡಿಕೊಂಡಿರುವನೋ ಆ ಮಗನು ಒಂದುವೇಳೆ ಒಂದೆರಡು ವರ್ಷ ಇದ್ದು ಹಿಂತಿರುಗಿ ತನ್ನ ಮನೆಗೆ ಹೋಗಲಿಚ್ಛಿಸಿದರೆ, ಕೇವಲ ಒಂದೆರಡು ವರ್ಷಗಳ ಮೋಹ ಪ್ರಬಲತೆಯಿಂದ ಆತನನ್ನು ಅವನ ಮನೆಗೆ ಕಳುಹಿಸಲು ಸಮ್ಮತಿಸಲಾರನು. ಒಂದುವೇಳೆ ಹೋಗಿಬಿಟ್ಟರೆ ಅಳುತ್ತ ಕುಳಿತುಕೊಳ್ಳುವರು. ಹೀಗೆ ಒಂದೆರಡು ವರ್ಷಗಳ ಮೋಹದಿಂದ ಈ ಜೀವನ ದುರವಸ್ಥೆಯು ಹೀಗಿರುವಾಗ ಅನಾದಿ ಕಾಲದಿಂದ ಇಂದ್ರಿಯಗಳ ವಿಷಯ, ಮೋಹಾದಿಗಳ ವಿಚಾರವಾಗಿ ಹೇಳುವುದೇನು? ಅದನ್ನು ಅಷ್ಟು ಸುಲಭವಾಗಿ ತ್ಯಜಿಸಲು ಸಾಧ್ಯವಾದೀತೆ? ಅರ್ಥಾತ್ ಎಂದಿಗೂ ಸಾಧ್ಯವಾಗುವುದಿಲ್ಲ. ಇದೇ ಪ್ರಕಾರವಾಗಿ ಈ ಕರ್ಮರಾಜನಾದ ಮೋಹನೀಯ ಕರ್ಮದಿಂದಲೇ ಜೀವರುಗಳು ಕುದೇವ, ಕುಶಾಸ್ತ್ರ, ಕುಗುರುಗಳ ಭಕ್ತರಾಗುತ್ತಾರೆ. ಹೀಗೆ ಮಿಥ್ಯಾತ್ವವನ್ನು ಬೆಳೆಸಿಕೊಂಡು ತನ್ನ ಆತ್ಮಸ್ವರೂಪವನ್ನು ಮರೆತು ಬಿಡುತ್ತಾರೆ. ಯಾವುದಾದರೊಂದು ಕಾಲಲಬ್ಧಿ ಮತ್ತು ತನ್ನ ಶುಭ ಪರಿಣಾಮಗಳ ಮೂಲಕ ಮಿಥ್ಯಾತ್ವ ಕರ್ಮಗಳ ಉಪಶಮನಮಾಡಿಕೊಂಡು ಸಮ್ಯಗ್‌ದರ್ಶನವನ್ನು ಪ್ರಾಪ್ತಮಾಡಿಕೊಳ್ಳವಾಗ ಆ ಸಮ್ಯಗ್ದರ್ಶನ ಜ್ಯೋತಿಪ್ರಭೆಯಿಂದ ತನ್ನಾತ್ಮ ಸ್ವರೂಪವನ್ನರಿಯಲು ಸಾಧ್ಯವಾಗುವುದು. ಹೀಗೆ ಆತ್ಮ ಸ್ವರೂಪವನ್ನು ತಿಳಿಯಲು ಉದ್ಯುಕ್ತನಾಗುವಾಗ ಆತ್ಮ ಸ್ವರೂಪವನ್ನು ಗ್ರಹಣೆಮಾಡುವುದು ಯೋಗ್ಯವೆಂದು ತಿಳಿದು ಪುತ್ರ, ಪುತ್ರಿ, ಪತ್ನೀ ಮೊದಲಾದವರ ಪದಾರ್ಥಗಳು ಹೇಯವೆಂದು ಭಾಸವಾಗುವುದು. ಈ ಪ್ರಕಾರ ತನ್ನಾತ್ಮ ಸ್ವರೂಪವನ್ನು ತಿಳಿದ ನಂತರ ಜೀವನು ಮೋಹವನ್ನು ತ್ಯಜಿಸಿ ಮನೆ, ಮಠಾದಿ ಕುಟುಂಬವರ್ಗವನ್ನು ತ್ಯಜಿಸುವನು ಮತ್ತು ಆತ್ಮಕಲ್ಯಾಣ ಕಾರ್ಯದಲ್ಲಿ ಲೀನನಾಗುವನು. ಅದ್ದರಿಂದ ಭವ್ಯಾತ್ಮರು ಪ್ರಪ್ರಥಮ ಮೋಹವನ್ನು ಬಿಟ್ಟುಬಿಡಬೇಕು. ಇದೇ ಆತ್ಮ ಕಲ್ಯಾಣದ ಸರ್ವೋತ್ತಮ ಉಪಾಯವಾಗಿರುತ್ತದೆ.

ಇನ್ನು ಮುಂದಕ್ಕೆ ಕುರುಡನಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಪಾಪೋದಯಾನ್ಮೇ ವದ ದೇವ ! ಕಸ್ಮಾತ್?
ಜೀವಃ ಕಿಲಾಂಧೋ ಭವತೀಹ ವಿಶ್ವೇ ॥

**ಅರ್ಥ** :- ಹೇ ಸ್ವಾಮಿನ್ ! ಸಂಸಾರದಲ್ಲಿ ಜೀವನು ಯಾವ ಪಾಪ ಕರ್ಮದ ಉದಯದಿಂದ ಕುರುಡನಾಗಿ ಜನಿಸುವನೆಂಬುದನ್ನು ದಯವಿಟ್ಟು ಹೇಳಬೇಕು.

ಉತ್ತರ :- ಬಲಾತ್ಪರೇಷಾಂ ನಯನಾನಿ ಭಿತ್ವಾ ।
ಯಃ ಸುಂದರಾಂಗೀಂ ಹೃತವಾನ್ ಧನಾದಿಂ ॥
ಅಂಧಾಪಮಾನಂ ಕೃತವಾನ್ ಕುವರ್ಗಾತ್ ।
ಮೃತ್ವಾಸ ಚಾಂಧೋ ಹಿ ಭವೇದಮುತ್ರೇ ॥ ೧೦ ॥

**ಅರ್ಥ** :- ಯಾವ ಪುರುಷನು ಬಲಾತ್ಕಾರ ಪೂರ್ವಕ ಪರರ ಕಣ್ಣುಗಳನ್ನು ಕೀಳುವನೋ ಅಥವಾ ಪರಸ್ತ್ರೀಯರ ಸುಂದರ ರೂಪಕ್ಕೆ ವಶೀಭೂತನಾಗಿ ಅವರನ್ನು ಅಪಹರಿಸುವನೋ ಅಥವಾ ಧನಾದಿಗಳನ್ನು ಕಿತ್ತುಕೊಳ್ಳುವನೋ ಅಥವಾ ತನ್ನ ದುರಭಿಮಾನದಿಂದ ಅಂಧರಾದ (ಕುರುಡ) ಕಣ್ಣಿಲ್ಲದವರನ್ನು ಕಂಡು ಹೀಯಾಳಿಸುತ್ತಾ ಧಿಕ್ಕಾರದ ಮಾತುಗಳನ್ನಾಡುವನೋ ಅಂತಹವನು ಮರಣಾನಂತರ ಪರಲೋಕದಲ್ಲಿ ಅಂಧನಾಗಿಯೇ ಜನಿಸುವನು.

**ಭಾವಾರ್ಥ** :- ಜೀವನು ಪೂರ್ವೋಪಾರ್ಜಿತ ಪಾಪ ಕರ್ಮದಿಂದಲೇ ಅಂಧ(ಕುರುಡ)ನಾಗುವುದು. ಇದರಲ್ಲಿ ಸಂಶಯವಿಲ್ಲವು. ಇಂತಹ ಪಾಪ ಕರ್ಮವು ಪರರ ಕಣ್ಣುಗಳನ್ನು ಕೀಳಿಸುವುದರಿಂದಲೂ, ಸುಂದರ ಸ್ಫುರದ್ರೂಪಿಣೀ ಸ್ತ್ರೀಯರನ್ನು ಅಪಹರಿಸುವುದರಿಂದಲೂ, ಪರರ ಧನಸಂಪತ್ತುಗಳನ್ನು ಕಿತ್ತುಕೊಳ್ಳುವುದರಿಂದಲೂ, ಮತ್ತು ಪಾಪ ಕಣ್ಣಿಲ್ಲದವರನ್ನು ಅಪಹಾಸ್ಯಗೈಯ್ಯುವುದರಿಂದಲೂ, ಉಂಟಾಗುವ ಮಹಾ ಪಾಪಕರ್ಮವು ಜೀವಗಳನ್ನು ಕುರುಡರನ್ನಾಗಿಯೇ ಮಾಡುವುದು. ಈ ಶರೀರದಲ್ಲಿ ಮುಖ ಮತ್ತು ಮಸ್ತಕಗಳು ಪ್ರಧಾನ ಅಂಗಗಳಾಗಿವೆ. ಆ ಮುಖದಲ್ಲಿ ಕಣ್ಣುಗಳೆರಡು ಸರ್ವೋತ್ತಮ ಸಾಧನಗಳೆಂದೆನ್ನಿಸಿಕೊಳ್ಳುತ್ತವೆ. ಕಣ್ಣುಗಳಿಲ್ಲದವನು ಮುನಿವ್ರತವನ್ನು ಪಾಲಿಸಲು



ಆಗುವುದಿಲ್ಲ. ಜೀವ ರಕ್ಷಣೆಯು ಕೂಡಾ ಸಾಧ್ಯವಿಲ್ಲ. ಜಿನ ದೇವನ ದರ್ಶನ, ಗುರುದರ್ಶನ, ಶಾಸ್ತ್ರಸ್ವಾಧ್ಯಾಯ, ಅಭಿಷೇಕ, ಪೂಜೆ ಮೊದಲಾದ ಉತ್ತಮ ಕಾರ್ಯಗಳನ್ನು ಮಾಡಲಾಗುವುದಿಲ್ಲ. ಪಾತಕಗಣವೇ, ಪರ ಜೀವಗಳ ಕಣ್ಣುಗಳನ್ನು ನಾಶಮಾಡುವುದು ಮಹಾ ಘೋರ ಪಾತಕವಾಗಿರುತ್ತದೆ. ಅಂತಹ ಪಾಪ ಕಾರ್ಯಗಳ ಆಸಕ್ತಿಯಿಂದ ಮರಣಾನಂತರ ಮುಂದಿನ ಜನ್ಮದಲ್ಲಿ ಕುರುಡನಾಗಿ ಜೀವನವೆಲ್ಲ ದುಃಖದಿಂದ ಕಳೆಯುವನು. ಆದ್ದರಿಂದ ನೀಚ ಪಾಪಕೃತ್ಯಗಳನ್ನು ಮಾಡದಿರುವುದೆ ಸುಖ-ಶಾಂತಿಯ ಮಾರ್ಗವಾಗಿರುತ್ತದೆ.

ಇನ್ನು ಮುಂದಕ್ಕೆ ಕುಂಟ(ಕಾಲಿಲ್ಲದವ)ನಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಪಾಪೋದಯಾನ್ಮೇ ವದ ದೇವ ಕಸ್ಮಾ - ।
ನ್ನಾಸ್ಛಿನ್ನ ದೇಹೀ ಭವತೀಹ ಲೋಕೇ ॥

**ಅರ್ಥ** :- ಹೇ ಪರಮ ದೇವ ! ಯಾವ ಮಹಾ ಪಾಪಕರ್ಮದ ಫಲವಾಗಿ ಜೀವನು ಈ ಲೋಕದಲ್ಲಿ ಕುಂಟನಾಗಿಯೂ, ಅಪಾಂಗನಾಗಿಯೂ ಜನಿಸುವನೆಂಬುದನ್ನು ದಯವಿಟ್ಟು ವಿವರಿಸಬೇಕು.

ಉತ್ತರ :- ಹಸ್ತೌ ಪರೇಷಾಂ ಚರಣೌ ಚ ಭಿತ್ವಾಽ ।
ತುಷ್ಯನ್ನೃಣಾಂ ಸ್ವಾರ್ಥವಶಾತ್ಪಶೂನಾಂ ॥
ದೃಷ್ಟ್ವಾ ಹ್ಯನಂದತ್ಖಲು ಭಿನ್ನ ದೇಹಂ ।
ಸಸ್ಯಾದ ಮುತ್ರೈಽಖಿಲ ಭಿನ್ನದೇಹೀ ॥ ೧೧ ॥

**ಅರ್ಥ** :- ಯಾವ ನರನು ತನ್ನ ಸ್ವಾರ್ಥಸಿದ್ಧಿಗಾಗಿ ಮಾನವರ ಅಥವಾ ಪಶುಗಳ ಕಾಲುಗಳನ್ನು, ಕೈಗಳನ್ನು ಕತ್ತರಿಸಿ ಹಾಕುವನೋ ಅಥವಾ ಅಪಾಂಗಿಗಳಾದ ಜೀವಗಳನ್ನು ನೋಡಿ ಸಂತೋಷಪಡುವನೋ ಅಂತಹ ಜೀವನು ಮರಣಾನಂತರ ಭಿನ್ನ-ಭಿನ್ನವಾದ ಶರೀರವನ್ನು ಹೊಂದಿ ವಿಕಲಾಂಗ, ಕುಂಟನಾಗಿಯೆ ಜನಿಸುವನು.

**ಭಾವಾರ್ಥ** :- ಮಹಾ ಪಾಪಕರ್ಮದ ಉದಯದಿಂದಲೇ ಕುಂಟ,

ವಿಕಲಾಂಗ, ಭಿನ್ನ-ಭಿನ್ನ ಅಂಗವುಳ್ಳವನಾಗುವುದು. ಈ ಪಾಪಕರ್ಮಬಂಧವು ಜೀವಗಳಿಗೆ ಘೋರ ದುಃಖವನ್ನುಂಟುಮಾಡುವುದರಿಂದಲೇ ಆಗುತ್ತದೆ. ಈ ಎಲ್ಲ ಅಂಗೋಪಾಂಗಗಳು ಇದ್ದರೆ ಮಾತ್ರ ತೀರ್ಥಯಾತ್ರೆ, ಜಿನಪೂಜನ, ಜಿನಾಭಿಷೇಕ, ಸ್ವಾಧ್ಯಾಯ, ಪಾತ್ರದಾನ, ಜಪ, ತಪಾದಿ ಉತ್ತಮ ಕಾರ್ಯಗಳು ಸುಗಮವಾಗಿ ಸಾಗುವುವು. ಆದ್ದರಿಂದ ಪರಜೀವಗಳ ಅಂಗೋಪಾಂಗಗಳನ್ನು ಕತ್ತರಿಸುವುದೆಂದರೆ, ಆತ್ಮ ಕಲ್ಯಾಣಕಾರಕಗಳಾದ ತಪಶ್ಚರಣಾದಿ ಕಾರ್ಯಗಳಲ್ಲಿ ಘೋರ ವಿಘ್ನಗಳನ್ನುಂಟುಮಾಡುವುದೆಂದರ್ಥವು. ಅಥವಾ ಯಾವ ಜೀವಗಳ ಅಂಗ, ಉಪಾಂಗಗಳು ಭಂಗಮಾಡಲ್ಪಡುತ್ತವೆಯೋ ಆ ಜೀವಗಳಿಗೆ ಮಹಾ ದುಃಖವುಂಟಾಗುವುದು. ಅದು ಮಹಾ ಪಾಪಕರ್ಮಗಳಿಗೆ ಕಾರಣೀಭೂತ ವಾಗಿರುತ್ತದೆ. ಅದರ ಉದಯದಿಂದ ಜೀವಗಳು ಕುಂಟ, ಕೈಕಾಲುಗಳಿಲ್ಲದ ಅಪಾಂಗನಾಗಿ ಜನಿಸುವನು. ಇಷ್ಟು ಮಾತ್ರವಲ್ಲ ವಿಕಲಾಂಗಿಗಳನ್ನು ನೋಡಿ ಹಾಸ್ಯ, ಕುಚೇಷ್ಟೆ ಮಾಡಿ ಸಂತೋಷಪಡುವುದೂ ಕೂಡಾ ಪಾಪಕ್ಕೇನೆ ಕಾರಣವಾಗಿರುತ್ತದೆ. ಆತ್ಮಕಲ್ಯಾಣೇಚ್ಛುಗಳು ಪರಜೀವಗಳ ಅಂಗೋಪಾಂಗ ಗಳನ್ನು ಭಂಗಗೊಳಿಸಬಾರದು. ಅವುಗಳನ್ನು ತನ್ನಂತೆ ಸುಖಿಗಳಾಗುವಂತೆ ಪ್ರಯತ್ನಿಸುವುದೇ ಆತ್ಮಕಲ್ಯಾಣದ ಸುಲಭ ಮಾರ್ಗವಾಗಿರುತ್ತದೆ.

ಮುಂದಕ್ಕೆ ಜೀವಘಾತಕನಾದ ಶಬರ(ಬೇಡ)ನಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕರ್ಮೋದಯಾನ್ಮೇ ವದ ದೇವ ಕಸ್ಮಾತ್ ।
ವ್ಯಾಧೋ ಭವೇತ್ಕೋ ಖಲು ಮಂದಭಾಗೀ ॥

ಅರ್ಥ :- ಹೇ ಭಗವಾನ್ ! ಪಶು-ಪಕ್ಷಿ ಮೊದಲಾದ ಪ್ರಾಣಿಗಳನ್ನು ಘಾತಗೊಳಿಸುವ ಬೇಡನ ಜನ್ಮವನ್ನು ಯಾವ ಪಾಪ ಕರ್ಮದ ಫಲದಿಂದ ಪಡೆಯುವನೆಂಬುದನ್ನು ದಯವಿಟ್ಟು ಅಪ್ಪಣೆಕೊಡಿಸಬೇಕು.

ಉತ್ತರ :- ಮಾಂಸಾದಿಭಕ್ಷೀ ಹ್ಯಸುಹಿಂಸಕೋ ಯೋ ।
ಧರ್ಮಸ್ಯದ್ವೇಷೀ ಕಲಹಪ್ರಿಯಶ್ಚ ॥



ವ್ಯಾಧಶ್ಚ ಪಾಪಾ ನ್ಮನುಜಃ ಸ ಮೃತ್ವಾ ।
ಭವತ್ಯವಶ್ಯಂ ಹತ ಧರ್ಮಕರ್ಮ ॥ ೧೨ ॥

ಅರ್ಥ :- ಮಾಂಸಭಕ್ಷನು, ಮದ್ಯಪಾನಿಯು, ಜೀವಜಾಲಗಳ ಪ್ರಾಣ ಘಾತಕನು, ಧರ್ಮದ್ವೇಷಿಯು ಮತ್ತು ಸರ್ವತ್ರ ಜಗಳ, ಕಲಹವನ್ನು ಮಾಡಿಕೊಂಡಿರುವ ಮಾನವನು ಆ ಮಹಾ ಪಾಪ ಕಾರ್ಯದ ಫಲವಾಗಿ ಮರಣಾನಂತರ ಧರ್ಮಬುದ್ಧಿ ದಯಾಹೀನ ಬೇಡರವನಾಗಿಯೇ ಜನ್ಮತಾಳುವನು.

ಭಾವಾರ್ಥ :- ಬೇಡನಾಗಿ ಜನಿಸುವುದು ಮಹಾ ಪಾಪ ಕರ್ಮದ ಫಲವೇ. ಅನೇಕ ಜೀವಗಳನ್ನು ಕೊಲ್ಲುವುದು, ಅನೇಕ ಪಕ್ಷಿಗಳ ಪ್ರಾಣಾಪಹಾರ ಮಾಡುವುದು ಅಥವಾ ಜೀವಂತ ಪ್ರಾಣಿಗಳನ್ನು ಹಿಡಿದು ನಾನಾ ವಿಧದ ದುಃಖವನ್ನುಂಟುಮಾಡುವುದು ಇವೇ ಮೊದಲಾದ ನೀಚ ಕಾರ್ಯಗಳು ಬೇಡರ ನಿತ್ಯ ಕ್ರಿಯೆಗಳಾಗಿವೆ. ಈ ಮಹಾಪಾಪ ಕಾರ್ಯಗಳ ಫಲವಾಗಿ ಜೀವಗಳು ನರಕಾದಿ ದುರ್ಗತಿ ದುಃಖವನ್ನು ಅನುಭವಿಸಬೇಕಾಗುವುದು. ಇಂತಹ ಶ್ರೇಷ್ಠ ಮಾನವ ಜನ್ಮವನ್ನು ಪಡೆದಿದ್ದರೂ ಕೂಡಾ ಮಾಂಸ ಭಕ್ಷಣ, ಮದ್ಯಪಾನ, ಪಂಚೋದುಂಬರ ಫಲ ಭಕ್ಷಣೆ, ಮದ್ಯ-ಮಾಂಸಾದಿ ಸಂಯುಕ್ತ ಔಷಧ ಸೇವನೆಮಾಡುವುದು, ವಿನೋದಕ್ಕಾಗಿ ಹಿಂಸಾನಂದಕ್ಕಾಗಿ ನಾನಾ ಜೀವಗಳ ಹಿಂಸೆಗೈಯುವುದು, ವಿನಾಕಾರಣ ಸರ್ಪ, ಚೇಳು ಮೊದಲಾದ ಜೀವಜಂತು ಗಳನ್ನು ನಿರ್ದಯರಾಗಿ ಕೊಲ್ಲುವುದು, ಹಾಗೆಯೇ ಧರ್ಮ ದ್ವೇಷದಿಂದ ತಾವೂ ಧರ್ಮಾಚರಣೆ, ಧರ್ಮಕಾರ್ಯಗಳನ್ನು ಮಾಡುವುದೂ ಇಲ್ಲ, ಪರರಿಗೆ ಮಾಡಲು ಸಮ್ಮತಿಸುವುದೂ ಇಲ್ಲ. ಇಷ್ಟುಮಾತ್ರವಲ್ಲ ; ಧರ್ಮ ಕಾರ್ಯಗಳಲ್ಲಿ ವಿಘ್ನಗಳನ್ನುಂಟುಮಾಡುವುದು, ಕಲಹಮಾಡುತ್ತಿರುವುದನ್ನು ನೋಡಿ ಸಂತೋಷಪಡುವುದು, ಮತ್ತು ಪಶುಗಳನ್ನು, ಪಕ್ಷಿಗಳನ್ನು, ಮನುಷ್ಯರನ್ನು ಪರಸ್ಪರ ಜಗಳವಾಡಿಸಿ ಸಂತೋಷಿಸುವವನು ಮರಣಾನಂತರ ಬೇಡನಾಗಿಯೇ ಜನಿಸುವನು. ಈ ಪರ್ಯಾಯದಿಂದಲೂ ಧಾರ್ಮಿಕ ಕಾರ್ಯಗಳನ್ನೆಸಗದೆ ನಿರಂತರವೂ ಹಿಂಸಾಕಾರ್ಯಗಳಲ್ಲಿ ಆಸಕ್ತರಾಗಿ ಅದರ ದುಷ್ಫಲವಾಗಿ ನರಕಾದಿ ದುರ್ಗತಿಗಳನ್ನು ಪಡೆಯುವರು. ಹೇ ಭವ್ಯರೇ!

ಉತ್ತಮ ಮಾನವ ಪರ್ಯಾಯವನ್ನು ಪಡೆದು ನೀಚಕಾರ್ಯಗಳನ್ನು ಮಾಡದಿರುವುದೇ ಆತ್ಮ ಕಲ್ಯಾಣದ ಸುಗಮ ಮಾರ್ಗವಾಗಿರುತ್ತದೆ.

ಇನ್ನು ಮುಂದಕ್ಕೆ ಕುಪುತ್ರಿಯು ಪ್ರಾಪ್ತಿಯಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕರ್ಮೋದಯಾನ್ಮೇ ವದ ದೇವ ! ಕಸ್ಮಾತ್ ।
ಪಿತಾ ಕುಪುತ್ರೀಂ ಲಭತೇಽನ್ಯಲೋಕೇ ॥

ಅರ್ಥ :- ಹೇ ಪರಮಾತ್ಮನೇ ! ಯಾವ ಪಾಪಕರ್ಮದ ಉದಯದಿಂದ ಅಥವಾ ಎಂತಹ ಘೋರ ದುಷ್ಕೃತ್ಯದ ಫಲವಾಗಿ ದುಷ್ಟಪುತ್ರಿಯು ಪ್ರಾಪ್ತಿಯಾಗುವಳೆಂಬುದನ್ನು ಕೃಪೆದೋರಿ ಹೇಳಬೇಕು.

ಉತ್ತರ :- ಕಸ್ಯಾಪಿ ಬಂಧೋರಪಮಾನ ಹೇತೋಃ ।
ಪ್ರದರ್ಶ್ಯ ಚಾನ್ಯಾಂ ಖಲು ತತ್ಕುಪುತ್ರೀಂ ॥
ಯೋಽಪ್ರೀಣಯನ್ನಿಂದ್ಯ ಸುತಾಮಭಾಗೀ ॥
ಸ ಚಾನ್ಯ ಲೋಕೇ ಲಭತೇ ಕುಪುತ್ರೀಂ ॥ ೧೩ ॥

ಅರ್ಥ :- ಒಳ್ಳೆಯ ಹೆಣ್ಣನ್ನು ತೋರಿಸಿ, ಮದುವೆ ಕಾಲದಲ್ಲಿ ನೀಚ ಕನ್ಯೆಯನ್ನು ಗಂಟುಹಾಕುವಂಥವರಿಗೆ ನೀಚ ಪುತ್ರಿಯು ಜನಿಸುವಳು.

ಭಾವಾರ್ಥ :- ಇಲ್ಲಿ ಕುಪುತ್ರಿ ಶಬ್ದದ ಅರ್ಥವು - ಕುರೂಪಿಯೂ, ಅಂಗೋಪಾಂಗಗಳಿಲ್ಲದವಳೂ, ಅಪಾಂಗಳೂ, ಅಂಧಳೂ, ಕಿವುಡಳೂ, ಮತ್ತು ಅನ್ಯ ಅನೇಕ ದೋಷಗಳಿಂದ್ಯುಕ್ತಳಾದವಳೂ ಎಂಬುದು ಭಾವವು. ಯಾರಾದರು ಕುರೂಪಿಯೂ, ಕುರುಡಳು, ಕುಂಟಿಯು ಆದ ಕನ್ಯೆಯನ್ನು ಸ್ವಯಂ ಸಂತೋಷ ಮನಸ್ಸಿನಿಂದ ವಿವಾಹಿತನಾದರೆ ಆ ವಿಷಯದಲ್ಲಿ ಯಾವ ಪ್ರಶ್ನೆಗಳೂ ಉದ್ಭವಿಸಲಾರವು. ಇಷ್ಟವಿಲ್ಲದ ಪುರುಷನಿಗೆ ಬೇರೆ ಯಾವುದೋ ಸುಂದರ ಕನ್ಯೆಯನ್ನು ತೋರಿಸಿ ಆತನನ್ನು ವಿವಾಹಕ್ಕಾಗಿ ಸಮ್ಮತಪಡಿಸಿಕೊಂಡು, ವಿವಾಹ ಸಂದರ್ಭದಲ್ಲಿ ಕಪಟದಿಂದ ತನ್ನ ಕುರೂಪಿಯೋ, ಕುರುಡಿಯೋ ಆದ ಮಗಳನ್ನಿತ್ತು ಪಾಣಿಗ್ರಹಣಕಾರ್ಯವನ್ನು ನಡೆಸುವವನು ಮಹಾ ಪಾಪಿ, ಮಹಾ



ನೀಚನೆಂದು ಪರಿಗಣಿಸಲ್ಪಡುವನು. ಈ ಪಾಪದ ನಿಮಿತ್ತದಿಂದ, ತಾನು ಛಲ, ಕಪಟ, ಮೋಸ, ಮೊದಲಾದ ದೋಷಗಳಿಗೂ, ಲಗ್ನವಾದ ವರನು ಲೋಕ ನಿಂದೆ, ಸಮಾಜದಲ್ಲಿ ಅಪಮಾನಗಳಿಗೂ ಗುರಿಯಾಗುವನು. ಇಂತಹ ಮಹಾ ಪಾಪಕರ್ಮ ಸಂಬಂಧ ಕಾರ್ಯಗಳ ಫಲವಾಗಿ ಪರಲೋಕದಲ್ಲಿ ಅತಿ ಕುರೂಪಿಯೂ, ಸಕಲ ದುರ್ಗುಣಯುಕ್ತಳಾದ ಕನ್ಯೆಯೇ ಜನಿಸುವಳು. ಆದ್ದರಿಂದ ಸದ್ಗೃಹಸ್ಥರು ಮಹಾ ಪಾಪಕ್ಕೆ ಕಾರಣವಾದ ಮಾಯಾಚಾರವನ್ನು ಮಾಡದಿರುವುದೇ ಸುಖಶಾಂತಿಯ ಮಾರ್ಗವಾಗಿರುತ್ತದೆ.

ಇನ್ನು ಮುಂದಕ್ಕೆ ಮೋಸಗಾರನಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಪಾಪೋದಯಾನ್ಮೇ ವದ ದೇವ ಕಸ್ಮಾ -
ನ್ಮೃತ್ವಾ ಮನುಷ್ಯಃ ಖಲು ವಂಚಕಃ ಸ್ಯಾತ್ ॥

ಅರ್ಥ :- ಹೇ ಭಗವಾನ್ ! ಈ ಮಾನವನು ಯಾವ ಪಾಪಕರ್ಮದ ಉದಯದಿಂದ ಮೋಸಗಾರನಾಗುವನೆಂಬುದನ್ನು ದಯವಿಟ್ಟು ಅಪ್ಪಣೆ ಕೊಡಿಸಬೇಕು.

ಉತ್ತರ :- ಚಿತ್ತೇಽನ್ಯ ಚಿಂತಾ ವಚನೇಽನ್ಯ ವಾರ್ತಾ ।
ಕಾಯೇಽನ್ಯ ಕೃತ್ಯಂ ಭವದಂಚ ಯಸ್ಯ ॥
ಸ ಏವ ಮೃತ್ವಾ ಭುವಿ ವಂಚಕಃ ಸ್ಯಾತ್ ।
ಪೂರ್ವೋಕ್ತ ಸಂಸ್ಕಾರವಶಾದಭಾಗೀ ॥ ೧೪ ॥

ಅರ್ಥ :- ಯಾವ ಮಾನವನು ಮನಸ್ಸಿನಲ್ಲೊಂದು ವಿಧವಾದ ವಿಚಾರವನ್ನಿಟ್ಟುಕೊಂಡು ವಚನದಿಂದ ಬೇರೆ ರೀತಿಯಾಗಿ ಹೇಳುವುದು ಮತ್ತು ಶರೀರದಿಂದ ಇನ್ನೊಂದು ಪ್ರಕಾರ ಕೆಲಸ ಮಾಡುವುದು. ಈ ಪ್ರಕಾರ ಜನ್ಮ-ಜರಾ-ಮರಣ ರೂಪ ಸಂಸಾರವನ್ನು ಬೆಳೆಸಿಕೊಳ್ಳುವ ಕಾರ್ಯಗಳನ್ನು ಮಾಡುವವನು. ಮರಣಾನಂತರ ತನ್ನ ಪೂರ್ವ ಜನ್ಮದ ಸಂಸ್ಕಾರಗಳ ನಿಮಿತ್ತದಿಂದ ನಿರ್ಭಾಗ್ಯನಾದ ಮೋಸಗಾರನಾಗಿಯೇ ಜನಿಸುವನು.

ಭಾವಾರ್ಥ :- ಪರರನ್ನು ಮೋಸಗೊಳಿಸುವುದು ಮಹಾ ಪಾತಕವಾಗಿ

ರುತ್ತದೆ. ಯಾರೂ ಇಂತಹ ಪಾಪಕಾರ್ಯಗಳನ್ನೆಸಗಬಾರದು. ಕೆಲವು ಜನರು ಸರಳ ಸ್ವಭಾವದ ಗುಣಗಳುಳ್ಳವರಿರುತ್ತಾರೆ. ಅವರಿಂದ ಮೋಸ, ಠಕ್ಕುತನ, ಕಪಟಾದಿ ಕಾರ್ಯಗಳು ಆಗುವುದಿಲ್ಲವು. ಜೀವಗಳು ಜನ್ಮಜನ್ಮಾಂತರಗಳಿಂದ ಮನ-ವಚನ-ಕಾಯಗಳ ಛಲ, ಕಪಟಾದಿ ಕುಟಿಲ ಪರಿಣಾಮಗಳನ್ನಿಟ್ಟು ಕೊಂಡು ಮನಸ್ಸಿನಲ್ಲಿ ವಿಚಾರಿಸುವುದು ಒಂದು ವಿಧವಾಗಿದ್ದರೆ, ಹೇಳುವುದು ಮತ್ತೊಂದು ವಿಧ. ಹೇಳುವುದು ಒಂದು ವಿಧವಾಗಿದ್ದರೆ, ಕಾರ್ಯ ಮಾಡುವುದು ಇನ್ನೊಂದು ವಿಧವು. ಇಂತಹ ಕುಟಿಲ ಸ್ವಭಾವದ ನೀಚ ಮಾನವನು ಮರಣಾನಂತರ ಮರು ಭವದಲ್ಲಿಯೂ ಮಹಾನೀಚ, ಮಹಾ ಕಪಟ, ಮಹಾ ಮೋಸಗಾರನಾಗಿಯೇ ಜನಿಸುವನು. ಈ ವಿಷಯವಾಗಿ ಮತ್ತಷ್ಟು ವಿಚಾರಿಸುವಾಗ ಛಲ, ಕಪಟ, ಮೋಸ ಪರಿಣಾಮವುಳ್ಳ ಮಾನವನು ಈ ಘೋರ ಪಾಪದ ಫಲವಾಗಿ ಮೃಗ ಪಕ್ಷಿಗಳಲ್ಲಿ ಮಾಯಾವಿಗಳಾಗ ಕಾಗೆ, ಗುಳ್ಳೆನರಿ, ಬೆಕ್ಕು ಮೊದಲಾದ ಪರ್ಯಾಯಗಳಲ್ಲಿ ಜನಿಸಿ ದುಃಖಕ್ಕೀಡಾಗುತ್ತವೆ. ಆದ್ದರಿಂದ ಆತ್ಮಸುಖೇಚ್ಛುಗಳು ಮಾಯ, ಕಪಟ ಪರಿಣಾಮದಿಂದ ದೂರ ವಿರುವುದೆ ಉತ್ತಮವು.

ಇನ್ನು ಮುಂದಕ್ಕೆ ಕಿವುಡನಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಪಾಪೋದಯಾನ್ಮೇ ವದ ದೇವ ಕಸ್ಮಾದ್ ।
ಭವತ್ಯವಶ್ಯಂ ಬಧಿರೋ ಹಿ ಜೀವಃ ॥

ಅರ್ಥ :- ಹೇ ಭಗವಾನ್ ! ಈ ಜೀವನು ಯಾವ ಪಾಪಕರ್ಮದ ಪ್ರಭಾವದಿಂದ ಕಿವುಡನಾಗುವನೆಂಬುದನ್ನು ದಯವಿಟ್ಟು ಅಪ್ಪಣೆ ಕೊಡಿಸ ಬೇಕು.

ಉತ್ತರ :- ಆಕರ್ಣ್ಯ ನೄಣಾಂ ಕುಕಥಾಂ ಪುರಾಯೋऽ-
ತುಷ್ಯದ್ಧಿ ಕೃತ್ವಾ ಬಧಿರಾಪಮಾನಮ್ ।
ಶ್ರುತ್ವಾಪಿ ವಾಚೋऽಶ್ರುತವಿವ ತಿಷ್ಠೇದ್
ಮೃತ್ವಾ ಸ ಮೂಢೋ ಬಧಿರೋ ಭವೇತ್ಕೌ ॥ ೧೫ ॥

ಅರ್ಥ :- ಯಾವ ಮನುಷ್ಯನು ಪೂರ್ವಜನ್ಮದಲ್ಲಿ ಮಾನವ ಸಂಬಂಧ



ವಾದ ಕುಕಥೆಗಳನ್ನು ಕೇಳಿ ಆನಂದ ಪಟ್ಟಿರುವನೋ, ಕಿವುಡರನ್ನು ಕಂಡು ಹಾಸ್ಯ, ಅಪಮಾನಗೊಳಿಸಿ ಸಂತೋಷಪಟ್ಟಿರುವನೋ ಅಥವಾ ಮಾತುಗಳು ಕೇಳಿ ಬರುತ್ತಿದ್ದರೂ ಕೇಳಬರದವನಂತೆ ನಟಿಸಿರುವನೋ ಅಂತಹ ಮೂರ್ಖ ಮಾನವನು ಸತ್ತು ಈ ಭೂ ಮಂಡಲದಲ್ಲಿ ಕಿವುಡನಾಗಿಯೇ ಜನಿಸುವನು.

ಭಾವಾರ್ಥ :- ಧರ್ಮಕಥಾ ಶ್ರವಣಮಾಡುವುದೇ ಕರ್ಣೇಂದ್ರಿಯದ ಸಾರ್ಥಕತೆಯು. ಧರ್ಮಕಥೆಗಳನ್ನು ಆತ್ಮಸ್ವರೂಪದ ತತ್ವಗಳ ಯಥಾರ್ಥ ಸ್ವರೂಪ ಕೇಳುವುದು ಮೋಕ್ಷಪ್ರಾಪ್ತಿಯ ಉಪಾಯಗಳಾಗಿರುತ್ತದೆ. ಇದನ್ನೇ ಪ್ರಾಪ್ತಮಾಡಿಕೊಳ್ಳುವ ಮಾನವನ ಜನ್ಮ ಸಾರ್ಥಕವು. ವಿಕಥೆಗಳನ್ನು ಕೇಳುವುದರಿಂದ ಪಾಪಕರ್ಮಗಳ ಬಂಧವಾಗುವುದು. ಅದರಲ್ಲಿ ಭೋಜನ ಕಥೆ, ಚೋರಕಥೆ, ರಾಷ್ಟ್ರಕಥೆ, ಯುದ್ಧ ಕಥೆ ಇವೇ ಮೊದಲಾದವುಗಳೆಲ್ಲ ವಿಕಥೆಗಳಾಗಿರುತ್ತವೆ. ಈ ವಿಕಥೆಗಳಿಗೆ ಕುಕಥೆಗಳೆಂದು ಹೇಳುತ್ತಾರೆ. ಇಂತಹ ಕಥೆಗಳನ್ನು ಕೇಳುವುದರಿಂದಲೂ, ಹೇಳುವುದರಿಂದಲೂ ಪಾಪರೂಪ ಪರಿಣಾಮವೇ ಉಂಟಾಗುತ್ತದೆ. ಆ ಪಾಪ ಪರಿಣಾಮಗಳಿಂದ ಪಾಪಕರ್ಮಗಳ ಬಂಧವು. ಅವುಗಳ ಉದಯವಾಗುವಾಗ ಜೀವನು ಪ್ರಾಯಃ ಕಿವುಡನಾಗಿಯೇ ಜನಿಸುವನು. ಜೀವಗಳು ತಂತಮ್ಮ ಕರ್ಮಗಳ ಫಲವಾಗಿ ಕಿವುಡರಾಗುವುದು. ಅವರನ್ನು ನೋಡಿ ಹಾಸ್ಯ, ಅಪಮಾನಗೊಳಿಸುವಿಕೆ ಇವೆಲ್ಲ ಕಾರ್ಯಗಳು ಪಾಪಕ್ರಿಯೆಗಳಾಗಿವೆ. ಇದರ ಫಲವಾಗಿ ಕಿವುಡನಾಗುವುದು. ಇದೇ ಪ್ರಕಾರವಾಗಿ ಧರ್ಮಕಥೆಗಳನ್ನು ಕೇಳಿಯೂ ಕೇಳದವನಂತೆ ನಟಿಸುವುದು, ಶಾಸ್ತ್ರ, ಗ್ರಂಥವನ್ನು ಕೇಳಿಯೂ ಓದಿಯೂ ಕೂಡಾ ಅದರ ಆಜ್ಞೆಯ ಪ್ರಕಾರ ವರ್ತಿಸದಿರುವವನು ಮುಂದಿನ ಭವದಲ್ಲಿ ಕಿವುಡನಾಗಿಯೇ ಜನಿಸುವನು. ಆದುದರಿಂದ ಧರ್ಮಾತ್ಮರುಗಳು ಪಾಪಕಾರಕ ವಿಕಥೆಗಳ ಸಂಬಂಧದಿಂದ ದೂರವಿರುವುದೇ ಲೇಸು. ಧರ್ಮಶಾಸ್ತ್ರಾಜ್ಞೆಯ ಪ್ರಕಾರ ವರ್ತಿಸುವುದು ಆತ್ಮ ಕಲ್ಯಾಣದ ಸುಲಭ ಮಾರ್ಗವಾಗಿರುತ್ತದೆ.

ಮುಂದಕ್ಕೆ ಮೂಕನಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕರ್ಮೋದಯಾನ್ಮೇ ವದ ದೇವ ಕಸ್ಮಾದ್ ।
ಜೀವೋऽನ್ಯ ಲೋಕೇ ಭವತೀಹ ಮೂಕಃ ॥

ಅರ್ಥ :- ಹೇ ಸದ್ಗುರುವೆ ! ದಯಮಾಡಿ ಈ ಜೀವನು ಯಾವ ಪಾಪ ಕರ್ಮದ ಉದಯದಿಂದ ಮೂಕನಾಗಿ ಜನಿಸುವನೆಂಬುದನ್ನು ಹೇಳಬೇಕು.

ಉತ್ತರ :- ವಸ್ತು ಹ್ಯಭಕ್ಷಂ ರಸನಾಪ್ರಲೋಭಾ ।
ದ್ಯೋಽಭಕ್ಷಯ ನ್ನಾಂ ಸಕಲೇವರಾದಿಂ ॥
ನಿರ್ಗ್ರಂಥ ಸಾಧೋರಕರೋತ್ತ್ಯನಿಂದಾಂ ।
ಮೃತ್ವಾ ಸ ಮೂಕೋ ಭವತಿ ಹ್ಯಮುತ್ರ ॥ ೧೬ ॥

ಅರ್ಥ :- ಯಾವ ಮನುಷ್ಯನು ತನ್ನ ಜಿಹ್ವಾ (ನಾಲಿಗೆಯ) ಲೋಲುಪತೆಯ ನಿಮಿತ್ತದಿಂದ ಜೀವಗಳ ಶರೀರದ ಮಾಂಸವನ್ನು ಅಥವಾ ಇವೇ ಮೊದಲಾದ ಅಭಕ್ಷ್ಯ ಪದಾರ್ಥಗಳನ್ನು ಭಕ್ಷಿಸುವನೋ, ನಿರ್ಗ್ರಂಥ ಗುರುಗಳಾದ ಸದ್ಗುರು ಮುನಿಗಳನ್ನು ನಿಂದಿಸುವನೋ ಅಂತಹವನು ಸತ್ತು ಮೂಕನಾಗಿಯೇ ಜನಿಸುವನು.

ಭಾವಾರ್ಥ :- ಮಾತನಾಡುವುದು, ಶಾಸ್ತ್ರಸ್ವಾಧ್ಯಾಯ ಮಾಡುವುದು, ಧರ್ಮೋಪದೇಶವನ್ನೀಯುವುದು, ಓದುವುದು, ಓದಿಸುವುದು ಇವೇ ಮೊದಲಾದ ಕಾರ್ಯಗಳು ಜಿಹ್ವೇಂದ್ರಿಯ ಕೆಲಸಗಳಾಗಿವೆ. ಯದ್ಯಪಿ ಭೋಜನದ ಸ್ವಾದವೂ ಕೂಡಾ ರಸನೇಂದ್ರಿಯದ ಕಾರ್ಯವು. ಆದರೆ ಸ್ವಾದಾಸ್ವಾದವು ಮೋಕ್ಷಮಾರ್ಗದಲ್ಲಿ ಸಹಾಯಕವಾಗದಿರುವುದರಿಂದ ಜಿಹ್ವೇಂದ್ರಿಯದ ಫಲವೆಂದು ಪರಿಗಣಿಸಲ್ಪಡುವುದಿಲ್ಲವು. ಆದ್ದರಿಂದ ಯಾರು ರಸನೇಂದ್ರಿಯದ ಲೋಲುಪತೆಯ ನಿಮಿತ್ತದಿಂದ ಮಾಂಸಾದಿ ಅಭಕ್ಷ್ಯ ಪದಾರ್ಥಗಳನ್ನು ಭಕ್ಷಿಸುತ್ತಾರೆಯೋ ಅವರಿಗೆ ಅದರ ಯಥಾರ್ಥ ಫಲವು ದೊರೆಯಲಾರದು. ಹಾಗೆಯೇ ಮೂಕನಾಗುವುದರಿಂದಲೂ ಆ ಜಿಹ್ವೇಂದ್ರಿಯ ಫಲದ ಅಭಾವವಾಗುವುದು. ಆದುದರಿಂದ ಇಂತಹ ಅನಿಷ್ಟ ಕಾರ್ಯಾಚರಣೆಯ ಫಲವಾಗಿ ಮೂಕನಾಗಿಯೇ ಜನಿಸುತ್ತಾನೆ. ಇದೇ ಪ್ರಕಾರವಾಗಿ ಸಾಧು-ಸಜ್ಜನರ ಸ್ತುತಿ, ಪೂಜೆ ಮೊದಲಾದ ಸತ್ಕಾರ್ಯಗಳು ನಡೆಯುವುದು ರಸನೇಂದ್ರಿಯ ಫಲವೇ ಆಗಿದೆ. ಮುನಿನಿಂದೆ, ಧರ್ಮನಿಂದೆ, ದೇವನಿಂದಾದಿಗಳನ್ನು ಮಾಡುವ ಮೂಢಜೀವಗಳು ಮರಣಾನಂತರ



ಜನ್ಮತಾಳಿ ಮೂಕರಾಗಿಯೇ ಜನಿಸುವರು. ಆದ್ದರಿಂದ ಧರ್ಮಾತ್ಮರಾದ ಶ್ರಾವಕ ವರ್ಗವು ಎಂದಿಗೂ ನಿಂದೆಗೈಯ್ಯಬಾರದು ಮತ್ತು ಅಭಕ್ಷ್ಯ ಭೋಜಿಗಳಾಗಬಾರದು.

ಮುಂದಕ್ಕೆ ದುಷ್ಟ ಸ್ವಭಾವದವನಾಗಿ ಜನಿಸಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕರ್ಮೋದಯಾನ್ಮೇ ವದ ದೇವ ಕಸ್ಮಾ - ।
ನ್ಮೃತ್ವಾ ಸ ಜೀವೋ ಭವತೀಹ ಧೂರ್ತಃ ॥

ಅರ್ಥ :- ಹೇ ಭಗವಾನ್ ! ಯಾವ ಪಾಪಕರ್ಮದ ಉದಯದಿಂದ ಈ ಜೀವನು ದುಷ್ಟನಾಗಿ ಜನಿಸುವನೆಂಬುದನ್ನು ಕೃಪೆದೋರಿ ಹೇಳಬೇಕು.

ಉತ್ತರ :- ಮಿಥ್ಯಾಪ್ರಲೋಭೀ ವ್ಯಸನೇ ನಿಮಗ್ನೋ ।
ನಾಸ್ತಿಕ್ಯವಾದೀ ಪರಲೋಕ ಲೋಪೀ ॥
ಇತ್ಯಾದಿ ಪಾಪಸ್ಯ ವಶಾತ್ಮಮಾಢೋ ।
ಮೃತ್ವಾ ಸ ಜೀವೋ ಭವತೀಹ ಧೂರ್ತ! ॥ ೧೭ ॥

ಅರ್ಥ :- ಮಿಥ್ಯಾಲೋಭಕ್ಕೆ ವಶೀಭೂತನಾಗಿ ದುರ್ವ್ಯಸನಗಳಲ್ಲಿ ಲೀನನಾಗುವನೋ, ನಾಸ್ತಿಕವಾದಿಯಾಗಿ ಪರಲೋಕ, ಕರ್ಮ ಮೊದಲಾದವುಗಳನ್ನು ನಂಬುವುದಿಲ್ಲವೋ ಅಂತಹ ಅಜ್ಞಾನಿ ಮಾನವನು ಮರಣಾನಂತರ ಈ ಪ್ರಪಂಚದಲ್ಲಿ ಮಹಾ ಧೂರ್ತನಾಗಿಯೇ ಜನಿಸುವನು.

ಭಾವಾರ್ಥ :- ಮಾಯಾಚಾರಿಗೂ, ಮೋಸಗಾರ-ಠಕ್ಕನಿಗೂ ಧೂರ್ತನೆಂದು ಹೇಳುತ್ತಾರೆ. ಮಹಾ ಪಾಪಕರ್ಮದ ಫಲವಾಗಿಯೆ ಧೂರ್ತ, ದುಷ್ಟ ಸ್ವಭಾವದವನಾಗಿಯೇ ಜನಿಸುವುದು. ಪರರಿಗೆ ಮೋಸಮಾಡುವುದೇ ಮಹಾ ಪಾತಕವಾಗಿರುತ್ತದೆ.

ಯಾರು ಮಿಥ್ಯಾಲೋಭದಿಂದ ಎಲ್ಲಿ ಲೋಭಮಾಡಬಾರದೋ ಅಲ್ಲಿ ಲೋಭ ತೋರಿಸುತ್ತಾನೆ. ಎಲ್ಲಿ ಲೋಭ ಮಾಡಬೇಕೋ ಅಲ್ಲಿ ಲೋಭವನ್ನು ಕಾಣಿಸುವುದಿಲ್ಲ. ಧನವಂತರು ಧಾರ್ಮಿಕ ಕಾರ್ಯಗಳಲ್ಲಿ ತಾವು ಸಂಪಾದಿಸಿದ

ಧನವನ್ನು ಉಪಯೋಗಿಸಬೇಕಲ್ಲದೆ ದುರ್ವ್ಯಸನಗಳಲ್ಲಿಯೋ ಅಥವಾ ಚಾರಿತ್ರವನ್ನು ನಾಶಮಾಡುವ ಪಾಪಾದಿ ಕಾರ್ಯಗಳಲ್ಲಿಯೋ ಹಣವನ್ನು ಉಪಯೋಗಿಸಬಾರದು. ಪರಂತು ಯಾರು ಧಾರ್ಮಿಕ ಕಾರ್ಯಗಳಲ್ಲಿ ವ್ಯಯಮಾಡದೆ ದುರ್ವ್ಯಸನಾದಿಗಳಲ್ಲಿ, ಆಟ-ಪಾಟ, ತಮಾಷೆಗಳಲ್ಲಿಯೂ, ದುರುಪಯೋಗ ಮಾಡುವವರು ಧಾರ್ಮಿಕ ಕಾರ್ಯಗಳಲ್ಲಿ ಲೋಭ ಕಾಣಿಸಿರುವ ಕಾರಣ ಮಿಥ್ಯಾಲೋಭಿಗಳೆಂದು ಹೇಳಿಸಿಕೊಳ್ಳುವರು. ಆ ಲೋಭಿಗಳು ಮರಣವನ್ನು ಹೊಂದಿ ದುರ್ಜನ ಮತ್ತು ನೀಚರಾಗಿಯೇ ಜನಿಸುವರು. ಇದೇ ಪ್ರಕಾರವಾಗಿ ಜೂಜಾಡುವುದು, ಕಳ್ಳತನಮಾಡುವುದು, ಬೇಟೆಯಾಡುವುದು, ಪರಸ್ತ್ರೀಹರಣಮಾಡುವುದು, ವೇಶ್ಯಾಗಮನಮಾಡುವುದು, ಮಾಂಸ ಭಕ್ಷಣೆಮಾಡುವುದು, ಮದ್ಯವನ್ನು ಸೇವಿಸುವುದು ಇವೇ ಮೊದಲಾದ ಸಪ್ತವ್ಯಸನಗಳಲ್ಲಿ ತನ್ಮಯರಾಗಿರುತ್ತಾರೆಯೋ, ಅವರೂ ಕೂಡಾ ಮರಣಾನಂತರ ಪರಜನ್ಮಗಳಲ್ಲಿ, ದುಷ್ಟರಾಗಿ ಜನಿಸುವರು. ಹೀಗೆಯೇ ನಾಸ್ತಿಕವಾದಿಗಳು ಪರಲೋಕದಲ್ಲಿ ನಂಬಿಕೆಯಿಲ್ಲದವರು, ಪುಣ್ಯ-ಪಾಪಗಳನ್ನು ನಿಷೇಧಿಸುವವರಾಗಿ ಪಾತಕ ಕಾರ್ಯಗಳಲ್ಲಿ ಮಗ್ನರಾಗಿರುತ್ತಾರೆ. ಅಂತಹವರು ಸತ್ತು ದುಷ್ಟ, ನೀಚಸ್ವಭಾವದವರಾಗಿಯೇ ಜನಿಸುವರು.

ಇನ್ನು ಮುಂದಕ್ಕೆ ರೋಗಿಯಾಗಲು ಕಾರಣವನ್ನು ಹೇಳುತ್ತಾರೆ.

ಪ್ರಶ್ನೆ :- ಕರ್ಮೋದಯಾನ್ಮೇ ವದ ದೇವ ! ಕಸ್ಮಾ - ।
ಜ್ಜೀವಃ ಸ ರೋಗೀ ಭವತೀಹ ಮೃತ್ವಾ ॥

ಅರ್ಥ :- ಹೇ ಭಗವಾನ್! ಈ ಜೀವನು ಯಾವ ಪಾಪಕರ್ಮದ ಉದಯದಿಂದ ರೋಗಿಯಾಗಿ ಜನಿಸುವನೆಂಬುದನ್ನು ದಯವಿಟ್ಟು ಹೇಳಬೇಕು.

ಉತ್ತರ :- ದತ್ತಂ ನ ದಾನಂ ಭುವಿ ಔಷಧಸ್ಯ ।
ಕೃತಾಪಿ ಸೇವಾ ನ ಚ ರೋಗಿಣೋऽಸ್ಯ ॥
ಕೃತಾಚ ಗರ್ವಾತ್ಖಲು ರೋಗಿ ನಿಂದಾ ।
ಮೃತ್ವಾ ಸ ರೋಗೀ ಭವತೀ ಹ್ಯಭಾಗ್ಯಃ ॥ ೧೮ ॥



ಅರ್ಥ :- ಯಾರು ಯಾವ ರೋಗಿಗೂ ಔಷಧಿಯನ್ನಾಗಲೀ ಅಥವಾ ರೋಗಿಯ ಸೇವೆ-ಶುಶ್ರೂಷೆಯನ್ನು ಕೂಡಾ ಮಾಡಿಲ್ಲವೋ, ಮಾತ್ರವಲ್ಲ ತದ್ವಿರುದ್ಧವಾಗಿ ಮಿಥ್ಯಾಭಿಮಾನಕ್ಕೆ ವಶೀಭೂತನಾಗಿ ರೋಗಿಗಳನ್ನು ನಿಂದಿಸುವುದು, ಅಪಮಾನಗೊಳಿಸುವುದು ಇವೇ ಮೊದಲಾದ ಧಿಕ್ಕಾರ ಕಾರ್ಯಗಳನ್ನು ಮಾಡಿರುವ ನಿರ್ಭಾಗ್ಯನು ಸತ್ತು ಮುಂದಿನ ಭವದಲ್ಲಿ ಮಹಾರೋಗಿಯಾಗಿ ದುಃಖಪಡುವನು.

ಭಾವಾರ್ಥ :- ಈ ಶರೀರವು ರೋಗಗಳ ಮಂದಿರವಾಗಿರುತ್ತದೆ. ಪಾಪಕರ್ಮದ ಉದಯದಿಂದಲೇ ರೋಗಾದಿಗಳು ಪ್ರಕಟವಾಗುವವು. ದಾನ ಮಾಡುವುದು ಪುಣ್ಯಕಾರ್ಯಕ್ಕೆ ನಿಮಿತ್ತಕಾರಣಗಳಾಗಿದೆ. ಧನಸಂಪತ್ತಿಯಿಂದ್ಯುಕ್ತನಾಗಿದ್ದು ದಾನ-ಧರ್ಮ ಕಾರ್ಯಗಳನ್ನು ಮಾಡದ ಮಾನವನು ಪಾಪಕಾರ್ಯಗಳನ್ನೆಸಗುತ್ತಿರುತ್ತಾನೆ. ಯಾವ ಪ್ರಕಾರವಾಗಿ ಭೋಜನವು ಸಿಕ್ಕಿದೊಡನೆ ಮಾನವನು ಸುಖೀಸಂತೃಪ್ತಿಯಾಗುವಂತೆ ಔಷಧದಾನದ ಪುಣ್ಯದಿಂದಲೂ ಸದಾಕಾಲವು ನಿರೋಗಿಯಾಗುವನು. ಹೀಗೆಯೇ ರೋಗಿಗಳ ಸೇವೆ ಶುಶ್ರೂಷೆ ಮಾಡುವುದರಿಂದಲೂ ಕೂಡಾ ನಿರೋಗತ್ವವೇ ಉಂಟಾಗುವುದು. ಕಾರಣ ರೋಗಿಯಾದವನು ಸದಾ ದುಃಖಾವಸ್ಥೆಯಲ್ಲಿರುತ್ತಾನೆ. ಅಂತಹ ದುಃಖವನ್ನು ದೂರಗೊಳಿಸುವುದು ಅಥವಾ ರೋಗನಿವಾರಣೆಗಾಗಿ ಔಷಧಿಯನ್ನು ಕೊಡಿಸುವುದು ಅಥವಾ ಆತನ ಸುಖಕ್ಕಾಗಿ ಸೇವೆಗೈಯುವುದೂ ಕೂಡಾ ನಿರೋಗತೆಗೆ ಕಾರಣೀಭೂತವಾಗಿರುತ್ತದೆ. ಯಾವ ಮಾನವನಿಗೆ ಈ ಎಲ್ಲ ಕಾರ್ಯಗಳನ್ನು ಮಾಡಲು, ಮಾಡಿಸಲು ಸರ್ವವಿಧ ಅನುಕೂಲಗಳಿದ್ದರೂ ಧರ್ಮಕಾರ್ಯಗಳನ್ನು, ದಾನವನ್ನು ಮಾಡುವುದಿಲ್ಲವೋ ಆ ವ್ಯಕ್ತಿಯು ಎಂದಿಗೂ ನಿರೋಗಿಯಾಗಲಾರನು. ಇದೇ ರೀತಿಯಾಗಿ ರೋಗಿಗಳನ್ನು ಕಂಡು ನಿಂದಿಸುವುದು, ಹಾಸ್ಯ ಮಾಡುವುದು ಕೂಡಾ ಮಹಾ ಪಾಪಕ್ಕೆ ಕಾರಣವಾಗುವುದು. ಮಾತ್ರವಲ್ಲ ಪರ ಜನ್ಮದಲ್ಲಿಯೂ ರೋಗಕ್ಕೆ ಬಲಿಯಾಗುವನು. ಆದ್ದರಿಂದ ಧನವಂತರು, ಸಮರ್ಥ ವೈದ್ಯರು, ಮೊದಲಾದವರು ತಮಗೆ ಸಾಧ್ಯವಾದಷ್ಟು ರೋಗಿಗಳಿಗೆ ಔಷಧ ದಾನಮಾಡುತ್ತಿರಬೇಕು. ಸೇವೆ-ಶುಶ್ರೂಷೆಯಲ್ಲಿಯು ಮಗ್ನರಾಗಿ ರೋಗಿಗಳಿಗೆ ಧೈರ್ಯ, ಸಮಾಧಾನ

ಹೇಳುತ್ತಾ ಶಾಂತಿಯನ್ನುಂಟುಮಾಡುವುದಲ್ಲದೆ ನಿಂದೆ, ಹಾಸ್ಯಗಳಿಂದ ದೂರವಿರುವುದೇ ಆತ್ಮ ಶಾಂತಿಯ ಸುಲಭ ಮಾರ್ಗವಾಗಿರುತ್ತದೆ.

ಮುಂದಕ್ಕೆ ಯಾವ ಕರ್ಮದ ಫಲವಾಗಿ ದುಃಖದಾಯಕ ಕುಟುಂಬದಲ್ಲಿ ಜನಿಸುವನೆಂಬುದನ್ನು ಹೇಳುತ್ತಾರೆ.

ಪ್ರಶ್ನೆ :- ಪಾಪೋದಯಾನ್ಮೇ ವದ ದೇವ ! ಕಸ್ಮಾತ್ ।
ದುಃಖಪ್ರದಂ ನಾ ಲಭತೇ ಕುಟುಂಬಮ್ ॥

ಅರ್ಥ :- ಹೇ ದಯಾಮೂರ್ತಿಯೇ ! ಈ ಜೀವನಿಗೆ ಯಾವ ಪಾಪ ಕರ್ಮದ ಉದಯದಿಂದ ದುಃಖವನ್ನುಂಟುಮಾಡುವ ವಂಶದಲ್ಲಿ ಜನನ ವಾಗುವುದೆಂಬುದನ್ನು ಅಪ್ಪಣೆ ಕೊಡಿಸಬೇಕು.

ಉತ್ತರ :- ಕಸ್ಯಾಪಿ ಜಂತೋಃ ಕಲಹಂ ಮಿಥೋಯಃ ।
ಉತ್ಪಾದ್ಯ ಕೃತ್ವೇತಿ ತತಃ ಕುವಾರ್ತಾಮ್ ॥
ಕೃತ್ವಾಪವಾದಂ ವಿಷಮಂ ಹ್ಯತುಷ್ಯತ್ ।
ಸಚ ವ್ಯಥಾದಂ ಲಭತೇ ಕುಟುಂಬಮ್ ॥ ೧೯ ॥

ಅರ್ಥ :- ಯಾರು ಪರರೊಡನೆ ಜಗಳವಾಡಿ ಸಂತುಷ್ಟನಾಗುವನೋ ಅಥವಾ ನೀಚ, ಕಠೋರ ವಚನಗಳನ್ನಾಡಿ ಪ್ರಸನ್ನನಾಗುವನೋ ಅಥವಾ ಯಾರಿಗಾದರೂ ದೋಷಾರೋಪಣೆಮಾಡಿ ಆನಂದಭರಿತನಾಗುವನೋ, ಅಂತಹ ಮಾನವನು ಮರಣಾನಂತರ ಪರಲೋಕದಲ್ಲಿಯೂ ಕೂಡ ದುಃಖ, ಕಷ್ಟಗಳನ್ನು ಅನುಭವಿಸುವ ಕುಟುಂಬದಲ್ಲಿಯೇ ಜನ್ಮತಾಳುವನು.

ಭಾವಾರ್ಥ :- ಕುಟುಂಬಿಗಳು ಸುಖಕ್ಕೆ ಕಾರಣೀಭೂತರು. ತಾಯಿ-ತಂದೆಗಳು ಸುಖದಾತೃಗಳೇ. ಸಹೋದರರು, ಪತ್ನಿ, ಪುತ್ರರೂ ಕೂಡಾ ಆನಂದ ದಾಯಕರೇ ಆಗಿರುತ್ತಾರೆ. ಆದರೆ ಯಾವ ಕುಟುಂಬದಲ್ಲಿ ಪ್ರತಿಯೊಬ್ಬರೂ, ಪ್ರತಿಸಮಯದಲ್ಲೂ ದುಃಖವನ್ನುಂಟುಮಾಡುವುದು, ಜಗಳ-ಕಲಹವನ್ನಾಡಿ ಕೊಂಡಿರುವುದು, ಇಂತಹ ಕುಟುಂಬದಲ್ಲಿ ಜನಿಸುವುದು ಮಹಾ ಪಾಪ ಕರ್ಮದ ತೀವ್ರ ಉದಯದಿಂದಲೇ ಲಭಿಸುವುದು. ಇಂತಹ ಕುಟುಂಬ ವರ್ಗದ



ವರನ್ನು ಮಹಾ ಶತ್ರುಗಳೆಂದೇ ತಿಳಿಯಬೇಕು. ಯಾವ ಮಾನವನು ಅನೇಕ ಜನರೊಡನೆ ಪರಸ್ಪರ ಜಗಳ-ಕಲಹ, ವಾದ-ವಿವಾದ ಮಾಡಿಕೊಂಡಿರು ತ್ತಾನೆಯೋ ಅಥವಾ ಜಗಳವಾಡಿಸಿಕೊಂಡಿರುತ್ತಾನೆಯೋ ಅಥವಾ ಅಶ್ಲೀಲ, ಅಸಭ್ಯಮಾತುಗಳನ್ನಾಡಿಕೊಂಡಿರುತ್ತಾನೆಯೋ ಅಥವಾ ಪರನಿಂದೆಗೈಯು ವುದು, ಪರರಿಂದ ಮಾಡಿಸುವುದು ಇವೇ ಮೊದಲಾದ ಅನ್ಯಾಯ, ಅಧರ್ಮ ಗಳನ್ನು ಮಾಡುವ ಮಾನವನು ಸತ್ತು ನಾನಾ ದುಃಖದ ದವಡೆಯಲ್ಲಿ ಸಿಲುಕಿಸುವ ಕುಟುಂಬದಲ್ಲಿ ಜನಿಸುವನು. ಅಲ್ಲಿ ತನ್ನ ಪೂರ್ವೋಪಾರ್ಜಿತ ಮಹಾ ಪಾಪಕರ್ಮದ ಉದಯದಿಂದ ಆ ಕುಟುಂಬೀ ಜನರಿಂದ ಮಹಾ ದುಃಖ, ಮಹಾ ಉಪದ್ರವ, ಮಹಾ ಕಷ್ಟಗಳನ್ನು ಅನುಭವಿಸಿಕೊಂಡಿರುತ್ತಾನೆ. ಈ ಎಲ್ಲ ವಿಚಾರವನ್ನರಿತು ಪರನಿಂದೆ, ದೋಷಾರೋಪಣೆ ಮೊದಲಾದ ಕೆಟ್ಟ ಕಾರ್ಯಗಳಿಂದ ದೂರವಿರುವುದೇ ಆತ್ಮಶಾಂತಿಯ ಸರಳ ಮಾರ್ಗ ವಾಗಿರುತ್ತದೆ.

ಇನ್ನು ಮುಂದಕ್ಕೆ ನೀಚ ಮತ್ತು ದುಷ್ಟ ಸ್ವಭಾವದವನಾಗಲು ಕಾರಣ ವನ್ನು ಹೇಳುತ್ತಾರೆ.

ಪ್ರಶ್ನೆ :- ಕರ್ಮೋದಯಾನ್ಮೇ ವದ ದೇವ ! ಕಸ್ಮಾದ್ ।
ದುಷ್ಟಸ್ವಭಾವೋ ಭವತೀಹ ಜೀವಃ ॥

ಅರ್ಥ :- ಹೇ ಪ್ರಭು ! ಈ ಜೀವನು ಯಾವ ಪಾಪಕರ್ಮದ ಉದಯ ದಿಂದ ದುಷ್ಟ ಸ್ವಭಾವದವನಾಗುವನೆಂಬುದನ್ನು ದಯವಿಟ್ಟು ಹೇಳಬೇಕು.

ಉತ್ತರ :- ಯಶ್ವಾಗತೇಃ ಶ್ವಭ್ರಗತಃ ಕುಬುದ್ಧಿ - ।
ರ್ಬಧ್ವಾ ನರಾಯುಃ ಪ್ರಥಮಂಹಿ ಪಶ್ಚಾತ್ ॥
ಭವೇತ್ಕುಮಾರ್ಗೀ ಖಲಸಂಗಕಾರೀ ।
ಮೃತ್ವಾ ಸ ಜೀವಃ ಖಲು ದುಷ್ಟಭಾವಃ ॥ ೨೦ ॥

ಅರ್ಥ :- ಯಾವ ಜೀವನು ನರಕಾಯುಷ್ಯವನ್ನು ತೀರಿಸಿಕೊಂಡು ಬಂದಿರುವನೋ, ನೀಚ ದುರ್ಬುದ್ಧಿಯುಳ್ಳವನೋ, ಮನುಷ್ಯಾಯುವನ್ನು

ಬಂಧಿಸಿಕೊಂಡು ಮತ್ತೆ ಕುಮಾರ್ಗಗಾಮಿಯಾಗಿರುವನೋ ಅಥವಾ ದುರ್ಜನ ಸಂಘದಲ್ಲಿ ಸಿಲುಕಿರುವ ಮಾನವನು ಮರಣವನ್ನು ಹೊಂದಿ ದುಷ್ಟ, ನೀಚ ಸ್ವಭಾವದವನಾಗಿಯೇ ಜನಿಸುವನು.

ಭಾವಾರ್ಥ :- ಘೋರ ಪಾಪಮಾಡಿದ ಜೀವವು ನರಕಗತಿಯನ್ನೇ ಪಡೆಯುವುದು. ಆ ಪಾಪ ಕರ್ಮಗಳ ಪರಂಪರೆಯ ನರಕದಲ್ಲಿಯೇ ಪೂರ್ಣವಾಗುವುದಿಲ್ಲವು. ಆದರೆ ನರಕದಿಂದ ಬಂದು ಪ್ರಾಪ್ತವಾಗುವ ಪರ್ಯಾಯದಲ್ಲಿಯೂ ಕೂಡಾ ಇದ್ದೇ ಇರುವುದು ಈ ನಿಮಿತ್ತದಿಂದಲೇ ಯಾವ ಜೀವವು ಘೋರ ಪಾಪದ ನಿಮಿತ್ತದಿಂದ ಏಳನೇಯ ನರಕದಲ್ಲಿ ಜನಿಸಿ ಪುನಃ ಅಲ್ಲಿಂದ ಚ್ಯುತನಾಗಿ ಸಿಂಹ, ಸರ್ಪ ಮೊದಲಾದ ಘಾತಕ ನೀಚ ಯೋನಿಗಳಲ್ಲಿ ಜನ್ಮತಾಳಿ ಅಲ್ಲಿಯೂ ಕೂಡ ಮಹಾ ಪಾಪಮಾಡಿ ಮತ್ತೆ ನರಕದಲ್ಲಿ ಜನಿಸಿ ಪುನಃ ನರಕದಿಂದ ಹೊರಬಂದು ಆ ಜೀವದ ಪರಿಣಾಮವು ಅತಿ ಕ್ರೂರ, ಕಠೋರವಾಗಿರುತ್ತದೆ. ಇಲ್ಲಿಯೂ ಕೂಡಾ ವಿಶೇಷ ವಿಷಯವನ್ನು ತಿಳಿದಿರಬೇಕು. ಮಿಥ್ಯಾದೃಷ್ಟೀ ಜೀವವು ನರಕದ ದುಃಖವನ್ನು ಅನುಭವಿಸಿ ಅಲ್ಲಿಂದ ಬಂದರೂ ಈ ಜೀವದ ಪರಿಣಾಮವು ಘೋರ, ನೀಚ ಕ್ರೂರವಾಗಿರುತ್ತದೆ. ಕಾರಣ ಅಂತಹ ಮಿಥ್ಯಾದೃಷ್ಟೀ ಜೀವಗಳ ಪರಿಣಾಮವು ನರಕದಲ್ಲಿಯೂ ಕೂಡ ದುಷ್ಟ ಪರಿಣಾಮವನ್ನೇ ಉಂಟುಮಾಡುತ್ತದೆ. ಆದರೆ ಯಾವ ಜೀವಕ್ಕೆ ನರಕದಲ್ಲಿ ಸಮ್ಯಕ್ತ್ವ ಪ್ರಾಪ್ತಿಯಾಗುವುದೋ ಅಥವಾ ನರಕಗತಿಯನ್ನು ಪಡೆಯುವುದಕ್ಕಿಂತ ಮೊದಲಿನ ಭವದಲ್ಲಿ ನರಕಾಯುವಿನ ಬಂಧಮಾಡಿಕೊಂಡು ಮೇಲೆ ಸಮ್ಯಗ್ದರ್ಶನವನ್ನು ಪ್ರಾಪ್ತಮಾಡಿಕೊಂಡಿರುವ ಸಮ್ಯಗ್ದೃಷ್ಟೀ ಜೀವಗಳ ಪರಿಣಾಮವು ನರಕದಲ್ಲಿಯೂ ಕೂಡಾ ದುಷ್ಟ ಸ್ವಭಾವದವರಾಗುವುದಿಲ್ಲವು. ಹೀಗಿರುವಾಗ ಅಲ್ಲಿಂದ ಚ್ಯುತವಾದ ಮೇಲೆ ಹೇಗೆ ತಾನೇ ದುಷ್ಟ ಸ್ವಭಾವದವರಾದಾರು ? ಅರ್ಥಾತ್ ಆಗುವುದಿಲ್ಲವೆಂದರ್ಥವು. ಆದ್ದರಿಂದ ಯಾವ ಮಿಥ್ಯಾದೃಷ್ಟೀ ಜೀವವು ನರಕದಿಂದ ಹೊರಬಂದು ಜನ್ಮತಾಳುವರೋ ಅವರು ದುಷ್ಟ ಭಾವನೆಯುಳ್ಳವರಾಗುತ್ತಾರೆ. ಅಥವಾ ಪುಣ್ಯಕರ್ಮವು ಕ್ಷಯವಾಗುವುದರಿಂದ ಯಾವ ಜೀವಗಳ ಬುದ್ಧಿ ಭ್ರಷ್ಟವಾಗುವುದೋ, ಹಾಗಾಗುವುದರಿಂದ ಧಾರ್ಮಿಕ ಕಾರ್ಯಗಳ ಲೋಪವಾಗಿ ಪಾಪರೂಪ



ಕಾರ್ಯಗಳನ್ನೇ ಮಾಡುತ್ತಿರುತ್ತಾನೆ. ಅಂತಹವರು ಮರಣವನ್ನು ಹೊಂದಿ ಪರಲೋಕದಲ್ಲಿಯೂ ದುಷ್ಟ ಪಾಪಮನಸ್ಕನಾಗಿಯೇ ಜನಿಸುವರು. ಅಥವಾ ಯಾವ ಜೀವನು ಮೊದಲು ಮನುಷ್ಯಾಯುವಿನ ಬಂಧಮಾಡಿಕೊಂಡಿರುವನೋ ಆ ಜೀವನು ಅನಂತರವೂ ಕುಮಾರ್ಗಗಾಮಿಯೂ, ಘೋರ ಪಾಪಕಾರ್ಯಗಳಲ್ಲಿ ಪ್ರವೃತ್ತನಾಗಿರುತ್ತಾನೆ. ಆ ಜೀವಗಳೂ ಕೂಡಾ ಸತ್ತು ಕ್ರೂರ, ದುಷ್ಟ ಸ್ವಭಾವವುಳ್ಳ ಮಾನವರಾಗಿಯೇ ಜನಿಸುತ್ತಾರೆ. ಇಲ್ಲಿ ಆಯುಷ್ಯ ಬಂಧವು ಪ್ರಧಾನಕಾರಣವಾಗಿರುತ್ತದೆ. ಅದು ವಿಮೋಚನೆಯಾಗುವುದಿಲ್ಲ. ಯಾವ ಜೀವಕ್ಕೆ ಮನುಷ್ಯಾಯುವಿನ ಬಂಧವಾಗಿರುವುದೋ ಅವನು ಮರಣಾನಂತರ ಮಾನವ ಪರ್ಯಾಯವನ್ನು ಪಡೆಯುತ್ತಾನೆ. ಅಲ್ಲಿಯೂ ಕುಮಾರ್ಗಗಾಮಿಯಾಗಿ ನಾನಾ ವಿಧವಾದ ಪಾಪಕಾರ್ಯಗಳನ್ನೇ ಮಾಡಿಕೊಂಡಿರುತ್ತಾನೆ. ಇದೇ ಪ್ರಕಾರವಾಗಿ ಯಾವನು ದುರ್ಜನರ ಸಂಘಾತಿಯ ಬಲೆಯಲ್ಲಿ ಸಿಲುಕಿ ದುರ್ಜನರ ಸಂಘ-ಸಹವಾಸದಿಂದ ಪಾಪಕಾರ್ಯಗಳಲ್ಲಿ ಉದ್ಯುಕ್ತನಾಗುತ್ತಾನೋ, ಅಂತಹ ಮಾನವನು ಮರಣವನ್ನು ಹೊಂದಿ ಮಹಾ ದುಷ್ಟನಾಗಿಯೇ ಜನಿಸುವನು. ಈ ವಿಷಯವನ್ನು ತಿಳಿದು ಪ್ರತಿಯೊಬ್ಬ ಗೃಹಸ್ಥನು ಕುಮಾರ್ಗದಿಂದಲೂ, ದುರ್ಜನರ ಸಂಘಾತಿಯಿಂದಲೂ ಮತ್ತು ಪಾಪಕೃತಿಗಳಿಂದ ರಕ್ಷಣೆ ಹೊಂದುತ್ತಿರಬೇಕು.

ಮುಂದಕ್ಕೆ ಭಯವಿಹ್ವಲನಾಗಲು ಕಾರಣವನ್ನು ವಿವರಿಸುತ್ತಾರೆ.

ಪ್ರಶ್ನೆ :- ಪಾಪೋದಯಾನ್ಮೇ ವದ ದೇವ ಕಸ್ಮಾದ್ ।
ಜೀವೋ ಭವೇತ್ಕ್ವ ಭಯವಾನ್ ಸದಾ ಹಿ ॥

ಅರ್ಥ :- ಹೇ ಭಗವಾನ್ ! ಈ ಜೀವನು ಯಾವ ಪಾಪಕರ್ಮದ ಉದಯದಿಂದ ಭಯಭೀತನಾಗುವ ಕಾರಣವನ್ನು ದಯವಿಟ್ಟು ಅಪ್ಪಣೆ ಕೊಡಿಸಬೇಕು.

ಉತ್ತರ :- ರಾಜ್ಞಸ್ತಥಾ ಭೂತಪಿಶಾಚಕಾನಾಂ ।
ಹೃತ್ವಾ ಧನಾದಿಂ ಚ ಭಯಂ ಪ್ರದರ್ಶ್ಯ ॥
ನಿಷ್ಕಾಸ್ಯ ಗೇಹಾನ್ಮನುಜಂ ಚ ಹತ್ವಾ ।
ಮೃತ್ವಾ ಸ ಜೀವೋ ಹಿ ಭಯಾನ್ವಿತಃ ಸ್ಯಾತ್ ॥ ೨೧ ॥